ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಗುರುವಾರ, ಅಕ್ಟೋಬರ್ 03, 2024

ಸಂಪುಟ : 51 ಸಂಚಿಕೆ : 141 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

### ದಾವಣಗೆರೆ, ಚಿತ್ರದುರ್ಗ, ತುಮಕೂರು ನೇರ ರೈಲು ಮಾರ್ಗ: ಸಭೆ ನಡೆಸಿದ ಸಚಿವ ಸೋಮಣ್ಣ

# 2027 ಜನವರಿಯೊಳಗೆ ರೈಲು ಸಂಚಾರಕ್ಕೆ ಕ್ರಮ



ದಾವಣಗೆರೆ,ಅ.2- ತುಮಕೂರು-ಚಿತ್ರದುರ್ಗ-ದಾವಣಗೆರೆ ನೇರ ರೈಲು ಹಾಗೂ ತುಮಕೂರು-ರಾಯದುರ್ಗ ರೈಲು ಮಾರ್ಗ ಯೋಜನೆಯ ಕಾಮಗಾರಿಯನ್ನು 2027 ರ ಜನವರಿ ಅಂತ್ಯದೊಳಗೆ ಪೂರ್ಣಗೊಳಿಸಿ ಉದ್ಘಾಟನೆ ಮಾಡಲು ಉದ್ದೇಶಿಸಲಾಗಿದೆ ಎಂದು ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ, ಕಂದಾಯ ಮತ್ತು ರೈಲ್ವೆ ಇಲಾಖೆ ಅಧಿಕಾರಿಗಳೊಂದಿಗೆ ನಡೆಸಿದ ಪ್ರಗತಿ ಪರಿಶೀಲನಾ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮಂದಗತಿಯಲ್ಲಿ ಸಾಗುತ್ತಿದ್ದ ದಾವಣಗೆರೆ-ಚಿತ್ರದುರ್ಗ-ತುಮಕೂರು ನೇರ ರೈಲು ಮಾರ್ಗದ ಕಾಮಗಾರಿ ಪ್ರಗತಿಯ ವೇಗವನ್ನು ಕಳೆದ ಎರಡೂವರೆ ತಿಂಗಳಲ್ಲಿ ಹೆಚ್ಚಿಸಲಾಗಿದೆ ಎಂದು ತಿಳಿಸಿದರು.

ತುಮಕೂರು-ಚಿತ್ರದುರ್ಗ-ದಾವಣಗೆರೆ ನೇರ ರೈಲು ಮಾರ್ಗ ಹಾಗೂ ತುಮಕೂರು- ರಾಯದುರ್ಗ ರೈಲು ಮಾರ್ಗದ ಭೂ ಸ್ವಾಧೀನ ಪ್ರಕ್ರಿಯೆ ಮುಕ್ತಾಯ ಹಂತದಲ್ಲಿದ್ದು, ರೈಲ್ವೆ ಕಾಮಗಾರಿಯನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರದಿಂದ ಅಭಿವೃದ್ಧಿ ಮಾಡಲಾಗುತ್ತದೆ. ವರ್ಷದ ಅಂತ್ಯಕ್ಕೆ ಕನಿಷ್ಠ 4 ರಿಂದ 5 ಕಡೆ ಕಾಮಗಾರಿ ಆರಂಭಿಸಲಾಗುವುದು ಎಂದು ಹೇಳಿದರು. ಈ ಯೋಜನೆಗೆ ಒಟ್ಟು 2406.73 ಎಕರೆ ಭೂಮಿ ಬೇಕಾಗಿದ್ದು, ಈಗಾಗಲೇ 2119.16 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ. 287.54 ಎಕರೆ ಸ್ವಾಧೀನ ಮಾಡಿಕೊಳ್ಳಬೇಕಾಗಿದ್ದು, ದಾವಣಗೆರೆ ಜಿಲ್ಲೆಯಲ್ಲಿ ಹಾದು ಹೋಗುವ 263.78 ಎಕರೆ ಜಮೀನಿನಲ್ಲಿ 246.20 ಎಕರೆ ಸ್ವಾಧೀನ ಪಡಿಸಿಕೊಂಡಿದ್ದು, 17.58 ಎಕರೆಯ ಸ್ವಾಧೀನ ಪ್ರಕ್ರಿಯೆ ವಿವಿಧ ಹಂತದಲ್ಲಿದೆ. ಕೆಲವೇ ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣವಾಗಲಿದೆ ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ ಒಟ್ಟು 21 ರೈಲ್ವೆ ಯೋಜನೆಗಳು ನಡೆಯುತ್ತಿದ್ದು, ಇದಕ್ಕಾಗಿ 43 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತದೆ. ಈ ಎಲ್ಲಾ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಿ, (4ನೇ ಪುಟಕ್ಕೆ)

**ಕನ್ನಡದಲ್ಲೇ ರೈಲ್ವೆ ಇಲಾಖೆಯ ಪರೀಕ್ಷೆ**

**ರೈಲ್ವೆ ಇಲಾಖೆಯಲ್ಲಿ ಒಟ್ಟು 12 ಲಕ್ಷ ನೌಕರರಿದ್ದು, 15 ಲಕ್ಷ ಜನರು ಪಿಂಚಣಿ ಪಡೆಯುತ್ತಿದ್ದಾರೆ. ಇಲಾಖೆಯಲ್ಲಿ 46 ಸಾವಿರ ಹುದ್ದೆಗಳು ಖಾಲಿಯಿದ್ದು, 16 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದೆ. ಈ ಪರೀಕ್ಷೆಯನ್ನು ಕನ್ನಡದಲ್ಲಿಯೇ ಬರೆಯಲು ಆದೇಶ ನೀಡಲಾಗಿದ್ದು ನಮ್ಮ ರಾಜ್ಯದ ಯುವಕರು ಇದರ ಉಪಯೋಗ ಪಡೆದುಕೊಳ್ಳಬೇಕು, ಮುಂದಿನ ದಿನಗಳಲ್ಲಿ ಖಾಲಿ ಇರುವ 46 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ ಎಂದು ಸಚಿವ ಸೋಮಣ್ಣ ಹೇಳಿದರು.**

## ನಗರದಲ್ಲಿ ಪಾಕ್ ಪ್ರಜೆ !

**ದಾವಣಗೆರೆಯ ಅಲ್ತಾಫ್ ವಿವಾಹವಾಗಿದ್ದ ಪಾಕ್‌ನ ಫಾತಿಮಾ**

**ನಿಶಾ ಶರ್ಮಾ ಎಂದು ಹೆಸರು ಬದಲು**

ದಾವಣಗೆರೆ, ಸೆ.2- ಪಾಕಿಸ್ತಾನದ ಮಹಿಳೆಯನ್ನು ಮದುವೆಯಾಗಿದ್ದ ದಾವಣಗೆರೆ ಯುವಕ ಹಾಗೂ ಕುಟುಂಬ ಸದಸ್ಯರು ಸೇರಿದಂತೆ ಆರು ಜನರನ್ನು ಪೊಲೀಸರು ಬಂಧಿಸಿದ್ದಾರೆ ಎನ್ನಲಾಗಿದೆ.

ಬಂಧಿತರನ್ನು ಮೊಹಮ್ಮದ್ ಹನೀಫ್, ರುಬೀನಾ, ಆಯೇಶ್ ಹನೀಫ್, ಮೊಹಮ್ಮದ್ ಯಾಸಿನ್, ಜೈನಾಬಿ ನೂರ್, ಫಾತಿಮಾ, ಅಲ್ತಾಫ್ ಎನ್ನಲಾಗಿದೆ.

ಇಲ್ಲಿನ ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ವಾಸವಾಗಿದ್ದ ಖಲಂದರ್ ಅವರ ಪುತ್ರ ಅಲ್ತಾಫ್ ಅಹ್ಮದ್ ಪಾಕಿಸ್ತಾನ ಮೂಲದ ಫಾತಿಮಾ ಅಲಿಯಾಸ್ ನಿಶಾ ಶರ್ಮಾ ಜೊತೆ ಪ್ರೇಮಾಂಕುರವಾಗಿ ಮದುವೆಯಾಗಿದ್ದ.

ಮದುವೆಯಾದ ಬಳಿಕ ಅಲ್ತಾಫ್ ಅಹ್ಮದ್ ಜೊತೆ ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿನ ಮನೆಗೆ ಫಾತಿಮಾ ಅಲಿಯಾಸ್ ನಿಶಾ ಶರ್ಮಾ ಬಂದು ಹೋಗುತ್ತಿದ್ದಳು. ಇವಳಿಗೆ (4ನೇ ಪುಟಕ್ಕೆ)

**ಪ್ರಥಮ ವರ್ಷದ ಪುಣ್ಯ ಸ್ಮರಣೆ**



ಎಸ್. ಎಮ್ ಷಡಾಕ್ಷರಯ್ಯ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶಿವಲೀಲಾ ಲೇಟ್ ಷಡಾಕ್ಷರಯ್ಯ
ಮಕ್ಕಳು : ವಿನುತ ಮತ್ತ ಕೃಪ ನಿಧಿ, ಮಂಜುಳ ಮತ್ತು ಶರಣ ಬಸವರಾಜು ಪುಷ್ಪ ಲೇಟ್ ಮೋಹನ್ ಸರೋಜ ಮತ್ತು ಆನಂದ್
ಮೊಮ್ಮಕ್ಕಳು : ದರ್ಶನ್, ಅನಘ್, ಸುಜಲ್, ಶರತ್, ಕ್ಷಮ, ಮನು, ಪ್ರೇಕ್ಷ, ಸೌರಭ ಹಾಗೂ ಬಂಧುಗಳು



## ಸರಳತೆಯ ಮೇಲ್ಪಂಕ್ತಿ, ಸುಸಂಸ್ಕೃತ ದೇಶ ಮಹಾತ್ಮ ಗಾಂಧೀಜಿ ತತ್ವ ಪಾಲಿಸಲು ಕರೆ


**ಜಿಲ್ಲಾಡಳಿತದಿಂದ ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಆಚರಣೆ**

ದಾವಣಗೆರೆ, ಅ. 2 - ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ತಮ್ಮ ಸರಳತೆಯಿಂದಲೇ ಇತರರಿಗೆ ಮೇಲ್ಪಂಕ್ತಿಯಾಗಿದ್ದು, ಶಾಂತಿ ಮತ್ತು ಅಹಿಂಸಾ ಮಂತ್ರದಿಂದಲೇ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟರು. ಅವರ ಈ ನಡೆ ಇಡೀ ಪ್ರಪಂಚಕ್ಕೇ ಮಾದರಿ ಎಂದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ತಿಳಿಸಿದರು.

ಅವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ರಾಮನಗರದಲ್ಲಿನ ಗಾಂಧಿ ಭವನದಲ್ಲಿ ಏರ್ಪಡಿಸಲಾದ ಸ್ವಚ್ಛತಾ ನಡಿಗೆ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಜನ್ಮ ದಿನಾಚರಣೆ ಹಾಗೂ ಲಾಲ್ (2ನೇ ಪುಟಕ್ಕೆ)

**ವೈಕುಂಠ ಸಮಾರಾಧನೆ ಆಹ್ವಾನ**

**ದಿ॥ ಶ್ರೀಮತಿ ಕೆ. ಪುಲ್ಲಮ್ಮ ದಿ॥ ಶ್ರೀ ಕೆ.ವಿ. ರೆಡ್ಡಿ ಹಾಗೂ ಕುಟುಂಬದವರು ಮಾಡುವ ವಿಜ್ಞಾಪನೆಗಳು**



ಜನನ :
06.12.1973

ನಿಧನ :
21.09.2024

**ಕೆ. ಶ್ರೀನಿವಾಸ ರೆಡ್ಡಿ**
**(ರಾಜು ರೆಡ್ಡಿ)**

ಪ್ರಥಮ ದರ್ಜೆ ಗುತ್ತಿಗೆದಾರರು

ಇವರು, ದಿನಾಂಕ : 21.09.2024ರ ಶನಿವಾರ ಬೆಳಿಗ್ಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರ ತತ್ಸಂಬಂಧವಾದ ಉತ್ತರ ಕ್ರಿಯಾದಿಗಳನ್ನು ದಿನಾಂಕ : 03.10.2024ರ ಗುರುವಾರ ಬೆಳಿಗ್ಗೆ 12.00 ಗಂಟೆಗೆ ಮೃತರ ಸ್ವಗೃಹ ಶಿವಕುಮಾರಸ್ವಾಮಿ ಬಡಾವಣೆ, 1ನೇ ಮೇನ್, 1ನೇ ಕ್ರಾಸ್, ಮಾಗನೂರು ಬಸಪ್ಪ ಪೆಟ್ರೋಲ್ ಬಂಕ್ ಹಿಂಭಾಗ, ದಾವಣಗೆರೆಯಲ್ಲಿ **ವೈಕುಂಠ ಸಮಾರಾಧನೆಯನ್ನು** ಏರ್ಪಡಿಸಲಾಗಿದೆ. ಈ ಪ್ರಯುಕ್ತ ತಾವೆಲ್ಲರೂ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಕೇಳಿಕೊಳ್ಳುತ್ತೇವೆ.

ಇಂತಿ ದುಃಖತಪ್ತರು :

- ಪತ್ನಿ : ಶ್ರೀಮತಿ ವರಲಕ್ಷ್ಮಿ ಕೆ. ಮತ್ತು ಮಕ್ಕಳಾದ ಚಿ. ಕೆ. ಹಿತೇಶ್ ರೆಡ್ಡಿ, ಕು. ಕೆ. ಹರ್ಷಿತ ರೆಡ್ಡಿ
- ಸಹೋದರ : ಶ್ರೀ ಕೆ. ನಾಗೇಂದ್ರ ರೆಡ್ಡಿ ಶ್ರೀಮತಿ ಸ್ನೇಹ ಪ್ರಿಯದರ್ಶಿನಿ ಚಿ. ಕೆ. ಜಶ್ವಂತ್ ರೆಡ್ಡಿ
- ಸಹೋದರಿಯರು :
  - ಶ್ರೀಮತಿ ಕೆ . ವಿಜಯಲಕ್ಷ್ಮಿ ದಿ॥ ಪಿ. ರಾಮಿರೆಡ್ಡಿ ಮತ್ತು ಕುಟುಂಬದವರು
  - ಶ್ರೀಮತಿ ಕೆ. ಭುವನೇಶ್ವರಿ ಶ್ರೀ ಹೆಚ್. ಚಂದ್ರಶೇಖರ ಮತ್ತು ಕುಟುಂಬದವರು
  - ದಿ॥ ಶ್ರೀಮತಿ ಕೆ. ಸುಮಂಗಲ ಶ್ರೀ ರವಿಕುಮಾರ್ ರೆಡ್ಡಿ ಮತ್ತು ಕುಟುಂಬದವರು
  - ಶ್ರೀಮತಿ ಕೆ. ಸುನಿತಾ ಶ್ರೀ ಹೇಮಂತ್ ರೆಡ್ಡಿ ಮತ್ತು ಕುಟುಂಬದವರು ಹಾಗೂ

ಕೋಟ್ಲಾ ಕುಟುಂಬಸ್ಥರು, ವರಿಕೋಟಿ ಕುಟುಂಬಸ್ಥರು ಹಾಗೂ ಅಪಾರ ಬಂಧು-ಮಿತ್ರರು.

98440 63133, 98458 73771

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

# ಶಾಂತಿಯುತ ಹೋರಾಟದಿಂದಲೂ ದೇಶಕ್ಕೆ ಸ್ವಾತಂತ್ರ್ಯ ಸಿಗಬಹುದು ಎಂದು ವಿಶ್ವಕ್ಕೆ ತಿಳಿಸಿಕೊಟ್ಟವರು ಗಾಂಧೀಜಿ



ಹರಿಹರ, ಅ. 2- ಅಶಾಂತಿ ಸೃಷ್ಟಿಸುವುದರಿಂದ ಸ್ವಾತಂತ್ರ್ಯ ಸಿಗಬಹುದು ಎಂದುಕೊಂಡಿದ್ದವರಿಗೆ ಶಾಂತಿಯುತ ಹೋರಾಟದಿಂದಲೂ ದೇಶಕ್ಕೆ ಸ್ವಾತಂತ್ರ್ಯ ಸಿಗಬಹುದು ಎಂದು ವಿಶ್ವಕ್ಕೆ ತಿಳಿಸಿಕೊಟ್ಟ ಮಹಾನ್ ವ್ಯಕ್ತಿ ಮಹಾತ್ಮಗಾಂಧೀಜಿ ಎಂದು ಶಾಸಕ ಬಿ.ಪಿ. ಹರೀಶ್ ತಿಳಿಸಿದರು.

**ಹರಿಹರ ಮಿನಿ ವಿಧಾನಸೌಧದಲ್ಲಿ ನಡೆದ ಗಾಂಧೀಜಿ - ಶಾಸ್ತ್ರೀಜಿ ಜಯಂತಿಯಲ್ಲಿ ಶಾಸಕ ಹರೀಶ್**

ನಗರದ ಮಿನಿ ವಿಧಾನಸೌಧದ ಸಭಾಂಗಣದಲ್ಲಿ ಮಹಾತ್ಮಗಾಂಧಿ ಅವರ 155ನೇ ಜನ್ಮ ದಿನಾಚರಣೆ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ 120 ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡುತ್ತಿದ್ದರು.

ಶಾಂತಿ ಮತ್ತು ಅಹಿಂಸೆಯಿಂದ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮಾ ಗಾಂಧೀಜಿ ಹಾಗೂ ಪ್ರಾಮಾಣಿಕತೆಗೆ ಹೆಸರಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ತ್ಯಾಗ-ಬಲಿದಾನಗಳನ್ನು ಇಂದು ಸ್ಮರಿಸಬೇಕಿದೆ ಎಂದರು.

ಮಹಾತ್ಮಗಾಂಧಿ ಅವರ ಗುಡಿಸಲು ಮುಕ್ತ ಹಾಗೂ ಸ್ವಚ್ಛ ಭಾರತದ ಕಲ್ಪನೆ ಬಹುತೇಕ ಈಡೇರಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ದೇಶ ಆರ್ಥಿಕವಾಗಿ ಹಿಂದುಳಿದಿತ್ತು. ಬಹುತೇಕ ಗ್ರಾಮಗಳು ಗುಡಿಸಲಿನಿಂದ ಹಾಗೂ ನಗರ ಪ್ರದೇಶಗಳು ಕೊಳಚೆಯಿಂದ ಕೂಡಿದ್ದವು. ಪ್ರಸ್ತುತ ದಿನಗಳಲ್ಲಿ ಶೇ. 95ರಷ್ಟು ಬದಲಾಗಿದೆ. ಪ್ರಧಾನ ಮಂತ್ರಿಗಳ ಕರೆಯ ಮೇರೆಗೆ ದೇಶಾದ್ಯಂತ ಸೆ. 14 ರಿಂದ ಸ್ವಚ್ಛತಾ ಅಭಿಯಾನ ನಡೆಯುತ್ತಿದೆ ಎಂದರು.

ತಹಶೀಲ್ದಾರ್ ಗುರು ಬಸವರಾಜ್ ಮಾತನಾಡಿ, ಯಾವುದೇ ಯುದ್ದ ಸಲಕರಣೆ ಇಲ್ಲದೇ ಇರುವ ಕಾಲದಲ್ಲಿ ಮಾನವ ಸಂಪನ್ಮೂಲವನ್ನು ಬಳಸಿ ಸ್ವಾತಂತ್ರ್ಯ ಸಿಗಲು ಮಹಾತ್ಮಗಾಂಧಿ ಅವರು, ಸತ್ಯ, ಶಾಂತಿ, ಅಹಿಂಸೆ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದರು. ಅಂದು ಎಂಥ ಕಷ್ಟ ಬಂದರೂ ತಮ್ಮ ತತ್ವಗಳನ್ನು ತ್ಯಜಿಸದೇ, ಸರಳತೆ ಮೂಲಕ ದೇಶಕ್ಕೆ ಮಾದರಿಯಾಗಿದ್ದರು ಎಂದರು.

ಲಾಲ್ ಬಹದ್ದೂರ್ ಶಾಸ್ತ್ರಿ ಅವರು ದೇಶ ಹಾಗೂ ಪ್ರಪಂಚ ಕಂಡ ಅಪ್ಪಟ ದೇಶಭಕ್ತ ಹಾಗೂ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಪ್ರಾಮಾಣಿಕತೆ ಎಂಬ ಪದ ಬಳಕೆಗೆ ಅವರು ಸಾಕ್ಷಿಯಾಗಿದ್ದರು. ಸರಳತೆಯಿಂದ ಕೂಡಿದ್ದ ಅವರ ಬ್ಯಾಂಕ್ ಖಾತೆಯಲ್ಲಿ ನಿಗದಿತ ಹಣ ಕೂಡ ಇರುತ್ತಿರಲಿಲ್ಲ. ಎಲ್ಲೋ ರೈಲು ದುರಂತವಾದರೆ, ಅದರ ನೈತಿಕ ಹೊಣೆ ಹೊತ್ತು ತಕ್ಷಣ ರಾಜೀನಾಮೆ ಸಲ್ಲಿಸಿದಂತಹ ಮಹಾನ್ ವ್ಯಕ್ತಿಯಾಗಿದ್ದರು ಎಂದರು.

ದೇಶದ ಜನತೆ ಹಸಿವಿನಿಂದ ಬಳಲುತ್ತಿದ್ದಾಗ ಜೈ ಜವಾನ್, ಜೈ ಕಿಸಾನ್ ಎಂಬ ಮೂಲ ಮಂತ್ರವನ್ನು ಪಠಿಸಿ ರೈತರ ಬಲವರ್ಧನೆಗೆ ಮುಂದಾದರು. ಪ್ರತಿಯೊಬ್ಬರೂ ಸೋಮವಾರ ಒಪ್ಪತ್ತಿನ ಊಟ ಬಿಡಲು ಕರೆ ನೀಡಿದ್ದರು. ಅದನ್ನು ಅಂದು ದೇಶದ ಜನತೆ ಒಪ್ಪಿ ಪಾಲಿಸಿದರು. ಅದರೆ ಇಂದಿನ ಕಾಲದಲ್ಲಿ ಸಭೆ ಸಮಾರಂಭಗಳಲ್ಲಿ ಬೇಕಾಬಿಟ್ಟಿಯಾಗಿ ಆಹಾರವನ್ನು ಹಾಳು ಮಾಡುವುದನ್ನು ಕಾಣುತ್ತಿದ್ದೇವೆ ಎಂದು ಬೇಸರ ವ್ಯಕ್ತ ಪಡಿಸಿದರು.

ತಾಪಂ ಇಓ ಸುಮಲತಾ, ಬಿಇಓ ದುರುಗಪ್ಪ ಉಪಸ್ಥಿತರಿದ್ದರು. ತಾಲ್ಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು ತಾಲ್ಲೂಕು ಕಚೇರಿಯ ಸಿಬ್ಬಂದಿ ಭಾಗವಹಿಸಿದ್ದರು.

## ಹೊಸಭರಂಪುರ : ಊರಮ್ಮ ದೇವಿ ಶರನ್ನವರಾತ್ರಿ



**ಹರಿಹರ**

ಹರಿಹರದ ಹೊಸಭರಂಪುರ ಬಡಾವಣೆಯ ಕಸಬಾ ಗ್ರಾಮದೇವತೆ ಊರಮ್ಮದೇವಿಯ 15 ನೇ ಶರನ್ನವರಾತ್ರಿ ಮಹೋತ್ಸವವು ಇಂದಿನಿಂದ ಇದೇ ದಿನಾಂಕ 12ರವರೆಗೆ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಸುರೇಶ್ ಚಂದಾಪೂರ್ ತಿಳಿಸಿದರು. ಪತ್ರಿನಿತ್ಯ ಬೆಳಗ್ಗೆ 6 ಗಂಟೆಗೆ ಘಟ ಸ್ಥಾಪನೆ, ಶ್ರೀ ದೇವಿಗೆ ನಂದಾದೀಪ, ವಿಘ್ನೇಶ್ವರ ಸ್ವಾಮಿಗೆ ವಿಶೇಷ ಪೂಜೆ ಮಹಾಮಂಗಳಾರತಿ ಅಲಂಕಾರ, ಕುಂಕುಮಾರ್ಚನೆ, ಲಲಿತ ಸಹಸ್ರನಾಮ ಹಾಗೂ ಸಂಜೆ ನಗರದ ವಿವಿಧ ಮಹಿಳಾ ಸಂಘದವರಿಂದ ಭಜನಾ ಕಾರ್ಯಕ್ರಮ ನಡೆಯಲಿದೆ.

ಇಂದು ಶೃಂಗೇರಿ ಶಾರದಾ ದೇವಿ ಅಲಂಕಾರ, ಸಂಜೆ ಶ್ರೀ ಹರಿ ಭಜನಾ ಮಂಡಳಿ ವತಿಯಿಂದ ಭಜನೆ ಲಲಿತಾ ಸಹಸ್ರಾರನಾಮ. ನಾಳೆ ಶುಕ್ರವಾರ ಚಂದ್ರ ಗುತ್ತೆಮ್ಮದೇವಿ ಅಲಂಕಾರ, ಸಂಜೆ ಶ್ರೀ ಗ್ರಾಮದೇವತೆ ಮಹಿಳಾ ಮಂಡಳಿ ವತಿಯಿಂದ ಭಜನೆ ಏರ್ಪಾಡಾಗಿದೆ.

## ನಗರದ ದುಗ್ಗಮ್ಮನ ದೇವಸ್ಥಾನದಲ್ಲಿ ಇಂದಿನಿಂದ ದಸರಾ ಮಹೋತ್ಸವ



ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಪುರೋಹಿತ ಶ್ರೀ ಕಡ್ಲೇಬಾಳು ಶ್ರೀಪಾದ ಭಟ್ಟರ ಸಮ್ಮುಖದಲ್ಲಿ ಇಂದು ಬೆಳಿಗ್ಗೆ 8 ಗಂಟೆಗೆ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುವುದು.

ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್‌ನ ಗೌರವ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ, ಶ್ರೀಮತಿ ಪ್ರಭಾ ಮತ್ತು ಎಸ್.ಎಸ್. ಮಲ್ಲಿಕಾರ್ಜುನ್, ಎಸ್.ಎಸ್. ಬಕ್ಕೇಶ್, ಎಸ್.ಎಸ್. ಗಣೇಶ್, ಎಸ್.ಬಿ. ಮುರುಗೇಶ್ ಇವರುಗಳು ಕುಟುಂಬ ಸಮೇತರಾಗಿ ದೀಪ ಬೆಳಗಿಸುವುದರೊಂದಿಗೆ 9 ದಿನಗಳ ಕಾಲ ನಡೆಯುವ ದಸರಾ ಮಹೋತ್ಸವಕ್ಕೆ ಚಾಲನೆ ನೀಡುವರು ಎಂದು ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಯುವ ಸಂಸತ್ ಸ್ಪರ್ಧೆ

ಜಿಲ್ಲಾ ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳ ಯುವ ಸಂಸತ್ ಸ್ಪರ್ಧೆಯನ್ನು ಇಂದು ಬೆಳಿಗ್ಗೆ 10 ಗಂಟೆಗೆ ನಗರದ ನಿಟುವಳ್ಳಿಯಲ್ಲಿನ ಆರ್.ಎಂ.ಎಸ್.ಎ. ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೊಟ್ರೇಶ್ ತಿಳಿಸಿದ್ದಾರೆ.

# ಮಲೇಬೆನ್ನೂರು ಪಟ್ಟಣಕ್ಕೆ ನೀರು ಪೂರೈಸುವ ಅಮೃತ 2.0 ಯೋಜನೆಗೆ ಮೋದಿ ಚಾಲನೆ



> ದೇವರ ಬೆಳಕೆರೆ ಪಿಕಪ್ ಡ್ಯಾಂ, ಕೊಂಡಜ್ಜಿ ಕೆರೆ ಮತ್ತು ಅಗಸನಕಟ್ಟೆ ಕೆರೆಗೆ ತುಂಗಭದ್ರಾ ನದಿಯಿಂದ ನೀರನ್ನು ಲಿಫ್ಟ್ ಮಾಡಿ ಹರಿಹರ ನಗರಕ್ಕೆ ನೀರು ಪೂರೈಸುವ ಚಿಂತನೆ ಇದೆ.
>
> -ಬಿ.ಪಿ. ಹರೀಶ್, ಶಾಸಕರು

ಮಲೇಬೆನ್ನೂರು, ಅ. 2- ತುಂಗಭದ್ರಾ ನದಿಯಿಂದ ಮಲೇಬೆನ್ನೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಮಹತ್ವಾಕಾಂಕ್ಷೆಯ ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಗೆ ಗಾಂಧಿ ಜಯಂತಿ ದಿನದಂದು ಪ್ರಧಾನಿ ನರೇಂದ್ರ ಮೋದಿ ನವದೆಹಲಿಯಲ್ಲಿ ಚಾಲನೆ ನೀಡಿದರು.

ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಣೆಗೆ ಪುರಸಭೆ ಕಛೇರಿ ಆವರಣದಲ್ಲಿ ಎಲ್‌ಇಡಿ ವ್ಯವಸ್ಥೆ ಮಾಡಲಾಗಿತ್ತು.

ಶಾಸಕ ಬಿ.ಪಿ. ಹರೀಶ್, ಪುರಸಭೆ ಪ್ರಭಾರಿ ಅಧ್ಯಕ್ಷೆ ಶ್ರೀಮತಿ ನಫ್ಸಿಯಾ ಬಾನು ಚಮನ್ ಷಾ ಸೇರಿದಂತೆ ಪುರಸಭೆಯ ಸರ್ವ ಸದಸ್ಯರು, ಗ್ರಾಮಸ್ಥರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಯೋಜನೆಯ ಜವಾಬ್ದಾರಿ ಹೊತ್ತಿರುವ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಪುರಸಭೆ ವತಿಯಿಂದ ಹಮ್ಮಿಕೊಂಡಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಪುರಸಭೆ ಅಧ್ಯಕ್ಷೆ ಶ್ರೀಮತಿ ನಫ್ಸಿಯಾ ಬಾನು ಅವರು, ಈ ಯೋಜನೆ ನಮ್ಮ ಪಟ್ಟಣಕ್ಕೆ ತುಂಬಾ ಅವಶ್ಯವಿತ್ತು. ಯೋಜನೆ ಮಂಜೂರು ಮಾಡಿದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಪಟ್ಟಣದ ಜನತೆಯ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಇಂಜಿನಿಯರ್ ಅನಿಲ್‌ಕುಮಾರ್ ಅವರು, ದಾವಣಗೆರೆ ಜಿಲ್ಲೆಯಲ್ಲೇ ಇದೊಂದು ಮಾದರಿ ಯೋಜನೆ ಆಗಲಿದ್ದು, ದಿನದ 24 ಗಂಟೆಯೂ ನಲ್ಲಿಯಲ್ಲಿ ನೀರು ಬರಲಿದೆ. ಪ್ರತಿನಿತ್ಯ ಒಬ್ಬ ವ್ಯಕ್ತಿಗೆ 135 ಲೀಟರ್ ನೀರನ್ನು ಪೂರೈಸುತ್ತೇವೆ.

66.64 ಕೋಟಿ ರೂ. ವೆಚ್ಚದ ಈ ಯೋಜನೆಗೆ ಕೇಂದ್ರ ಸರ್ಕಾರ ಅನುದಾನ ಶೇ. 50, ರಾಜ್ಯ ಸರ್ಕಾರದ ಅನುದಾನ ಶೇ. 40 ಮತ್ತು ಸ್ಥಳೀಯ ಸಂಸ್ಥೆ ವಂತಿಗೆ ಶೇ. 10ರಷ್ಟು ಇರುತ್ತದೆ.

2055ಕ್ಕೆ ಪಟ್ಟಣದ ಜನಸಂಖ್ಯೆ 44 ಸಾವಿರ ಆಗಬಹುದೆಂದು ಪರಿಗಣಿಸಿ ಈ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಖಾಸಗಿ ಕಂಪನಿಗೆ ಟೆಂಡರ್ ಆಗಿದ್ದು, ಕಾಮಗಾರಿ ಆರಂಭಿಸಲು ಕಾರ್ಯಾದೇಶವನ್ನು ನೀಡಲಾಗಿದೆ. 2 ವರ್ಷದೊಳಗೆ ಯೋಜನೆ ಪೂರ್ಣಗೊಳ್ಳಲಿದೆ ಎಂದು ಅನಿಲ್‌ಕುಮಾರ್ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ದೇಶದ 148 ನಗರ, ಪಟ್ಟಣಗಳಿಗೆ ಕುಡಿಯುವ ನೀರು ಪೂರೈಸುವ ಅಮೃತ 2.0 ಯೋಜನೆಯ ಆರಂಭಕ್ಕೆ ನಾವು ಸಾಕ್ಷಿಯಾಗಿರುವುದಕ್ಕೆ ಖುಷಿ ತಂದಿದೆ. ಇಂತಹ ಉತ್ತಮ ಯೋಜನೆ ಪಡೆದ ಮಲೇಬೆನ್ನೂರಿನ ಜನತೆ ಪುಣ್ಯವಂತರು ಎಂದ ಹರೀಶ್ ಅವರು, ಹರಿಹರ ನಗರಕ್ಕೂ ನೀರು ಪೂರೈಸುವ ಇಂತಹ ಸಮಗ್ರ ಯೋಜನೆ ಅತಿ ಅವಶ್ಯವಾಗಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರ ಗಮನಹರಿಸಬೇಕೆಂದು ಮನವಿ ಮಾಡಿದರು.

ಗೋವಿನಹಾಳ್ ಬಳಿಯ ತುಂಗಭದ್ರಾ ನದಿಯಿಂದ ನೀರು ಪೂರೈಸುವ ಈ ಯೋಜನೆ ಯಶಸ್ವಿಯಾಗಬೇಕಾದರೆ ನದಿಯಲ್ಲಿ ನೀರು ಬತ್ತಿದಾಗ ನೀರಿನ ಸಮಸ್ಯೆ ಆಗದಂತೆ ನೀರು ಸಂಗ್ರಹ ಕೆರೆಯನ್ನು ನಿರ್ಮಿಸುವುದು ಸೂಕ್ತ ಎಂಬ ಸಲಹೆಯನ್ನು ಶಾಸಕ ಹರೀಶ್ ಅಧಿಕಾರಿಗಳಿಗೆ ನೀಡಿದರು.

ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ್, ಪುರಸಭೆ ಸದಸ್ಯರಾದ ಖಲೀಲ್, ಗೌಡ್ರ ಮಂಜಣ್ಣ, ಕೆ.ಜಿ. ಲೋಕೇಶ್, ನಯಾಜ್, ಸಾಬೀರ್ ಅಲಿ, ಷಾ ಅಬ್ರಾರ್, ಬೆಣ್ಣೆಹಳ್ಳಿ ಸಿದ್ದೇಶ್, ದಾದಾಪೀರ್, ಬಿ. ಮಂಜುನಾಥ್, ಶಬ್ಬೀರ್ ಖಾನ್, ಬೋವಿ ಶಿವು, ಟಿ. ಹನುಮಂತಪ್ಪ, ವಿಜಯಲಕ್ಷ್ಮಿ ಗಂಗಾಧರ್, ಸುಧಾರಾಜು, ಅಕ್ಕಮ್ಮ ಸುರೇಶ್, ಮಂಜುಳಾ ಕುಮಾರ್, ಸುಮಯ್ಯ ರುಸ್ತುಂ, ಮೀನಾಕ್ಷಮ್ಮ ಹಾಲೇಶಪ್ಪ, ಸುಲೋಚನಮ್ಮ ಕುಮಾರ್,ನಗಿನಾ ಅನ್ವರ್, ನಾಜೀಮಾ ಜಮೀರ್, ತಹಸೀನಾ ಯುಸೂಫ್, ನಾಮಿನಿ ಸದಸ್ಯರಾದ ಬಿ. ವೀರಯ್ಯ, ಎ. ಆರೀಫ್ ಅಲಿ, ಬುಡ್ಡನವರ್ ರಫೀಕ್ ಸಾಬ್, ಬಸವರಾಜ್ ದೊಡ್ಡಮನಿ, ಎಕ್ಕೆಗೊಂದಿ ಕರಿಯಪ್ಪ, ಪುರಸಭೆ ಅಧಿಕಾರಿಗಳಾದ ದಿನಕರ್, ಉಮೇಶ್, ನವೀನ್, ಜಯಲಕ್ಷ್ಮಿ, ಚಿತ್ರಾ ಶಿವರಾಜ್, ಅವಿನಾಶ್, ರಾಘವೇಂದ್ರ, ಧನಂಜಯ, ಇಮ್ರಾನ್ ಮತ್ತಿತರರು ಭಾಗವಹಿಸಿದ್ದರು.

ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಎಇಇ ಎಂ.ಬಿ. ರವಿ ಸ್ವಾಗತಿಸಿದರು. ಪುರಸಭೆ ಸದಸ್ಯ ಸಾಬೀರ್ ಅಲಿ ನಿರೂಪಿಸಿದರೆ, ಮಂಡಳಿಯ ಎಇ ಪ್ರಕಾಶ್ ಸಜ್ಜನ್ ವಂದಿಸಿದರು.

## ನಗರದ ಶ್ರೀ ರೇಣುಕಾ ಎಲ್ಲಮ್ಮ ದೇವಿ ದೇವಸ್ಥಾನದಲ್ಲಿ ಇಂದಿನಿಂದ ದಸರಾ



ಬಸವ ಬುದ್ಧ ಭೀಮ ನಗರದ ಶ್ರೀ ರೇಣುಕಾ ಎಲ್ಲಮ್ಮ ದೇವಿ ದೇವಸ್ಥಾನದಲ್ಲಿ ಇಂದಿನಿಂದ ದಸರಾ ಹಬ್ಬದ ಕಾರ್ಯಕ್ರಮಗಳು ನಡೆಯಲಿವೆ. ಇಂದು ಸಂಜೆ ದೀಪ ಹಾಕಲಾಗುವುದು ಮತ್ತು ಘಟ್ಟಾ ಹಾಕಲಾಗುತ್ತದೆ. ನಾಳೆ ಶುಕ್ರವಾರ ಅರಿಶಿಣ ಅಲಂಕಾರ ಮಾಡಲಾಗುತ್ತದೆ.

## ಯಲವಟ್ಟಿ ಮಠದಲ್ಲಿ ಪುರಾಣ



ಮಲೇಬೆನ್ನೂರಿನ ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದಲ್ಲಿ ವಿಜಯ ದಶಮಿಯ ನವರಾತ್ರಿ ಅಂಗವಾಗಿ ಇಂದಿನಿಂದ 9 ದಿನಗಳ ಕಾಲ ಪ್ರತಿ ನಿತ್ಯ ಬೆಳಗ್ಗೆ 8ಕ್ಕೆ ಆದಿಶಕ್ತಿ ದೇವಿಗೆ ಪೂಜೆ ಸಲ್ಲಿಸಿದ ನಂತರ ಶ್ರೀ ಯೋಗಾನಂದ ಸ್ವಾಮೀಜಿಯವರು ದೇವಿ ಪುರಾಣ ಹೇಳಲಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದಿನಿಂದ ವಿವಿಧೆಡೆ ಶರನ್ನವ ರಾತ್ರಿ, ಪುರಾಣ, ಭಜನೆ





ಮಲೇಬೆನ್ನೂರು ಪಟ್ಟಣದ ಮುಖ್ಯ ವೃತ್ತದಲ್ಲಿರುವ ಶ್ರೀ ಚೌಡೇಶ್ವರಿ ದೇವಿ ಮತ್ತು ಶ್ರೀ ಗಂಗಮ್ಮದೇವಿ ದೇವಸ್ಥಾನದಲ್ಲಿ ಶರನ್ನವರಾತ್ರಿ (ದಸರಾ) ಹಬ್ಬದ ಅಂಗವಾಗಿ ಇಂದಿನಿಂದ ಇದೇ ದಿನಾಂಕ 12 ರವರೆಗೆ ಪ್ರತಿ ದಿನ ಸಂಜೆ 6.30 ರಿಂದ 9 ಗಂಟೆಯವರೆಗೆ ದೇವಿ ಮಹಾತ್ಮೆ ಪುರಾಣ ಪ್ರವಚನ ಹಾಗೂ ಶ್ರೀ ಚೌಡೇಶ್ವರಿ ದೇವಿ ಭಜನಾ ಸಂಘದಿಂದ ಭಜನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಸಭೆ ಸದಸ್ಯ ಗೌಡ್ರು ಮಂಜಣ್ಣ, ಅರ್ಚಕ ಪೂಜಾರ್ ಚಿಕ್ಕಪ್ಪ ತಿಳಿಸಿದ್ದಾರೆ.

ಪುರಾಣ ಪ್ರವಚನ, ಭಜನೆ ನಂತರ ಪ್ರತಿ ದಿನ ರಾತ್ರಿ ಪ್ರಸಾದ ವ್ಯವಸ್ಥೆ ಮಾಡಲಾಗಿದ್ದು, ಇಂದು ಬೆಳಗ್ಗೆ 9 ಗಂಟೆಗೆ ಘಟ ಸ್ಥಾಪನೆ ನೆರವೇರಲಿದೆ.

ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲೂ ಇಂದಿನಿಂದ ನವರಾತ್ರಿ ಉತ್ಸವ ನಡೆಯಲಿದ್ದು, ಭದ್ರಕಾಳಮ್ಮನಿಗೆ ಪ್ರತಿನಿತ್ಯ ದೇವಿ ಅಲಂಕಾರ, ಪೂಜೆ ಮಾಡಲಾಗುವುದೆಂದು ದೇವಸ್ಥಾನ ಕಮಿಟಿಯ ಬಿ. ಚಿದಾನಂದಪ್ಪ ತಿಳಿಸಿದ್ದಾರೆ. ಕೊಕ್ಕನೂರಿನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಮತ್ತು ಜಿಗಳಿ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ದೀಪ ಹಾಕಲಾಗುವುದು.

# ಗಾಂಧೀಜಿಯವರ ತತ್ವ-ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು




**ಹರಪನಹಳ್ಳಿ ತಾಲ್ಲೂಕು ಆಡಳಿತದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್**

ಹರಪನಹಳ್ಳಿ, ಅ. 2 - ಸತ್ಯಾಗ್ರಹದ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ತತ್ವ ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕರಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ಸರ್ಕಾರಿ ಜ್ಯೂನಿಯರ್ ಕಾಲೇಜಿನ ಗಾಂಧಿ ಮೆಮೋರಿಯಲ್ ಹಾಲ್‌ನ ಆವರಣದಲ್ಲಿ ಬುಧವಾರ ತಾಲ್ಲೂಕು ಆಡಳಿತ ಆಯೋಜಿಸಿದ್ದ ಮಹಾತ್ಮಾಗಾಂಧೀಜಿ ಹಾಗೂ ಲಾಲು ಬಹದ್ದೂರ್ ಶಾಸ್ತ್ರೀಜಿಯವರ ಜಯಂತ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇಶದ ಉದ್ದಗಲಕ್ಕೂ ಫಕ್ಕೀರನಂತೆ ಸಂಚರಿಸಿ ಬ್ರಿಟೀಷರ ವಿರುದ್ಧ ಉಪವಾಸ ಸೇರಿದಂತೆ ಅನೇಕ ಚಳುವಳಿಗಳನ್ನು ಮಾಡಿ ಗಾಂಧೀಜಿಯವರು ನಮಗೆ ಮಾದರಿಯಾದರು ಎಂದು ಹೇಳಿದರು.

ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಗಾಂಧೀಜಿಯವರು ಹೆಜ್ಜೆ ಗುರುತು ಬಿಟ್ಟು ಹೋಗಿದ್ದಾರೆ. ಅವರು ಹರಪನಹಳ್ಳಿ ಜ್ಯೂನಿಯರ್ ಕಾಲೇಜಿನಲ್ಲಿ ತಂಗಿದ್ದ ಕೊಠಡಿಯಲ್ಲಿ ಅವರ ಏಕಶಿಲೆ ಮೂರ್ತಿಯನ್ನು ನಿರ್ಮಾಣ ಮಾಡಿರುವುದು ಏಷ್ಯಾದಲ್ಲೇ ಮೊದಲು ಎಂದ ಅವರು, ಗಾಂಧಿ ಮೆಮೋರಿಯಲ್ ಹಾಲ್ ಐತಿಹಾಸಿಕ ತಾಣವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು.

ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಮಾತನಾಡಿ, ಗಾಂಧೀಜಿಯವರು ದೇಶದ ಜನರನ್ನು ಒಗ್ಗೂಡಿಸಿ ಸತ್ಯ-ಅಹಿಂಸೆ ಮೂಲಕ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ಚೇತನ ಎಂದು ಹೇಳಿದರು.

ದಕ್ಷಿಣ ಆಫ್ರಿಕಾದಲ್ಲಿದ್ದ ಜನಾಂಗೀಯ ಬೇಧವನ್ನು ಖಂಡಿಸಿದರು. ಹೆಣ್ಣು-ಗಂಡು ಎಂಬ ಭೇದವನ್ನು ತಳ್ಳಿ ಹಾಕಿದರು. ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೆ ಮೌಢ್ಯಗಳನ್ನು ವಿರೋಧಿಸಿ ಸಾಮಾಜಿಕ ಬದಲಾವಣೆ ಬಯಸಿದ್ದರು ಎಂದು ಹೇಳಿದರು.

ಶಿಕ್ಷಕಿ ಶ್ವೇತಾ ಜಿ.ವಿಶೇಷ ಉಪನ್ಯಾಸ ನೀಡಿದರು. ಪುರಸಭ ಸದಸ್ಯರಾದ ಎಂ.ವಿ. ಅಂಜಿನಪ್ಪ, ಅಬ್ದುಲ್ ರೆಹಮಾನ್, ಲಾಟಿ ದಾದಾಪೀರ್, ಟಿ.ವೆಂಕಟೇಶ, ಎಸ್. ಜಾಕೀರ್ ಹುಸೇನ್, ಉದ್ದಾರ ಗಣೇಶ, ಮಂಜುನಾಥ ಇಜಂತಕರ್, ಭೀಮವ್ವ, ಸಣ್ಣಹಾಲಪ್ಪ, ಭರತೇಶ, ಕೊಟ್ರೇಶ, ಹನುಮಕ್ಕ ಚಿಕ್ಕೇರಿ ಬಸಪ್ಪ, ಸತ್ತೂರು ಯಲ್ಲಮ್ಮ, ತಹಶೀಲ್ದಾರ್ ಬಿ.ವಿ. ಗಿರೀಶ್ ಬಾಬು, ತಾ.ಪಂ ಇಓ ವೈ.ಎಚ್.ಚಂದ್ರಶೇಖರ್, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಗಂಗಪ್ಪ, ಬಿಇಓ ಎಚ್. ಲೇಪಾಕ್ಷಪ್ಪ, ಕೃಷಿ ಅಧಿಕಾರಿ ಉಮೇಶ, ಸಿಡಿಪಿಓ ಅಶೋಕ, ಮುಖಂಡರಾದ ಕೆ.ಕುಬೇರಪ್ಪ, ಇಸ್ಮಾಯಿಲ್ ಎಲಿಗಾರ, ಜಾವೀದ್, ಸೈಯದ್ ಇರ್ಫಾನ್ ಛಲವಾದಿ ಪರಶುರಾಮ, ಗಿರಜ್ಜಿ ಮಂಜುನಾಥ್ ಸೇರಿದಂತೆ ಇತರರು ಇದ್ದರು.

# ಸುಸಂಸ್ಕೃತ ದೇಶ ಗಾಂಧೀಜಿ ತತ್ವ ಪಾಲಿಸಲು ಕರೆ

**(1ನೇ ಪುಟದಿಂದ)** ಬಹುದ್ದೂರ್ ಶಾಸ್ತ್ರೀಜಿ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗಾಂಧೀಜಿಯವರ ಸರಳತೆ ಹಾಗೂ ಸ್ವಚ್ಛತೆ ಸಂದೇಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ನಮ್ಮ ಮನೆ ಹಾಗೂ ಸುತ್ತಮುತ್ತಲಿನ ವಾತಾವರಣದಲ್ಲಿ ಸ್ವಚ್ಛತಾ ಕಾರ್ಯ ನಿತ್ಯ ನಡೆಯಬೇಕು ಎಂದವರು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಕಲ್ಪನೆಯಂತೆ ದೇಶವನ್ನು ಸುಶಿಕ್ಷಿತ, ಸುಸಂಸ್ಕೃತ ದೇಶವನ್ನಾಗಿಸಬೇಕಿದೆ. ಗಾಂಧೀಜೀಯವರ ತತ್ವ, ಆದರ್ಶ, ಸರಳತೆಯನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಗಾಂಧಿ ಭವನದಲ್ಲಿ ನಿರಂತರವಾಗಿ ಚಟುವಟಿಕೆಗಳು ನಡೆಯಬೇಕಿದೆ. ಈಗಾಗಲೇ ವಿವಿಧ 12 ಇಲಾಖೆಗಳಿಂದ ಕಾರ್ಯಕ್ರಮ ಆಯೋಜಿಸಲು ಮತ್ತು ಸರ್ಕಾರದಿಂದ ಆಚರಿಸಲಾಗುವ ಬಹುತೇಕ ಜಯಂತಿಗಳನ್ನು ಇಲ್ಲಿಯೇ ಆಚರಣೆ ಮಾಡಲು ಆದೇಶಿಸಲಾಗಿದೆ. ಮುಂದಿನ ದಿನಗಳಲ್ಲಿ ಸ್ವ ಸಹಾಯ ಸಂಘದಿಂದ ತಯಾರಿಸುವ ವಿವಿಧ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಗಾಂಧಿ ಭವನ ನಿರ್ವಹಣೆಗಾಗಿ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಶಾಸಕರ ಸಹಯೋಗದೊಂದಿಗೆ ನಿರ್ವಹಣಾ ಸಮಿತಿ ರಚನೆ ಮಾಡಿ ಚಟುವಟಿಕೆಗಳಿಗೆ ಇನ್ನಷ್ಟು ಮಹತ್ವ ಕಲ್ಪಿಸಲಾಗುತ್ತದೆ ಎಂದರು.


ಮಹಾನಗರ ಪಾಲಿಕೆಯ ಮೇಯರ್ ಕೆ. ಚಮನ್ ಸಾಬ್ ಮಾತನಾಡಿ, ಹಿಂದೂ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಶಾಂತಿ ಮತ್ತು ಅಹಿಂಸೆಯನ್ನೇ ಬೋಧಿಸಿವೆ. ಆದರೆ, ಇಂದಿನ ದಿನಮಾನಗಳಲ್ಲಿ ಯುವಕರು ಧರ್ಮ, ದೇವರ ಕಲ್ಪನೆಗಳನ್ನು ತಪ್ಪಾಗಿ ಅರ್ಥೈಸಿಕೊಂಡು ಸಂಘರ್ಷದ ಹಾದಿ ತುಳಿಯುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ಶಾಂತಿ ಮತ್ತು ಅಹಿಂಸೆ ಪಾಲಿಸದಿದ್ದರೆ ದೇಶಕ್ಕೆ ಗಂಡಾಂತರ ಎದುರಾಗಲಿದೆ ಎಂದು ಎಚ್ಚರಿಸಿದರು.

ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಸದಾ ಶಾಂತಿ ಮತ್ತು ಅಹಿಂಸೆಯನ್ನು ಪಾಲನೆ ಮಾಡುತ್ತಿದ್ದ ಗಾಂಧೀಜಿ ಚಳುವಳಿಗಳ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು ಎಂದು ಹೇಳಿದರು.

ಇದಕ್ಕೂ ಮುನ್ನ ಕಾರ್ಯಕ್ರಮದ ಅಂಗವಾಗಿ ಸ್ವಚ್ಛತಾ ನಡಿಗೆಯ ನಂತರ ಸ್ವಚ್ಛತೆಯ ಶ್ರಮದಾನ ನಡೆಯಿತು. ನಂತರ ಗಾಂಧಿ ಭವನದ ಸಭಾಂಗಣದಲ್ಲಿ ಸರ್ವಧರ್ಮ ಪ್ರಾರ್ಥನೆ, ಭಜನ್ ಗೀತಗಾಯನ ನಡೆಯಿತು.


ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ.ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಪಾಲಿಕೆಯ ಉಪ ಮೇಯರ್ ಸೋಗಿ ಶಾಂತಕುಮಾರ್, ಪಾಲಿಕೆ ಸದಸ್ಯರಾದ ಎ. ನಾಗರಾಜ್, ಆಶಾ ಉಮೇಶ್, ಉಪ ವಿಭಾಗಾಧಿಕಾರಿ ಸಂತೋಷ್ ಪಾಟೀಲ್, ದೂಡಾ ಆಯುಕ್ತ ಹುಲ್ಲುಮನಿ ತಿಮ್ಮಣ್ಣ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೊಟ್ರೇಶ್, ಪದವಿ ಪೂರ್ವ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ, ಆವರಗೆರೆ ರುದ್ರಮುನಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಬಿ.ಧನಂಜಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ನಜ್ಮಾ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಜಗದೀಶ್ ಕಣಕುಪ್ಪೆ ನಿಧನ



ದಾವಣಗೆರೆ ಸಿಟಿ, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್ ವಾಸಿ ರಾಜೇಶ್ವರಿ ಕೆ.ಜೆ. ಇವರ ಪತಿ ಜಗದೀಶ್ ಕಣಕುಪ್ಪೆ (54) ಇವರು ದಿನಾಂಕ : 01.10.2024ರ ಬೆಳಿಗ್ಗೆ 7.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯನ್ನು ಅಂದೇ ದಿನಾಂಕ : 01.10.2024ರ ಮಂಗಳವಾರ 4.30ಕ್ಕೆ ಶಾಮನೂರು ಗ್ಲಾಸ್ ಹೌಸ್ ಹತ್ತಿರದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

## ಶಾಮನೂರಿನ ಕಮಲಮ್ಮ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ದಿ. ಶ್ರೀ ರೇವಣಸಿದ್ಧಾಚಾರ್ ಇವರ ಧರ್ಮಪತ್ನಿ ಶ್ರೀಮತಿ ಕಮಲಮ್ಮ (81) ಇವರು ದಿನಾಂಕ : 02.10.2024ರ ಬುಧವಾರ ಮಧ್ಯಾಹ್ನ 2.30ಕ್ಕೆ ನಿಧನರಾದರು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 03.10.2024ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಗ್ಲಾಸ್ ಹೌಸ್ ಬಳಿಯ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಶಂಕರ ಮಠದಲ್ಲಿ ಇಂದು ಹೋಮ

ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದ ಬಳಿ ಇರುವ ಶ್ರೀ ಶಂಕರ ಮಠದಲ್ಲಿ ನವರಾತ್ರಿ ಅಂಗವಾಗಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು, ಹೋಮಗಳು, ವಿಶೇಷ ಅಲಂಕಾರ, ಪೂಜಾ ಕಾರ್ಯಗಳು ಜರುಗಲಿವೆ.

ಇಂದು ಬೆಳಿಗ್ಗೆ 7 ಕ್ಕೆ ಮಹಾಗಣಪತಿ ಪೂಜೆ, ಪುಣ್ಯಾಹವಾಚನ, ದೇವನಾಂದಿ ಋತ್ವಿಗ್ವರಣೆ, ಮಹಾಸಂಕಲ್ಪ, ಅಂಕುರಾರ್ಪಣೆ, ದೀಪಸ್ಥಾಪನೆ, ಮಹಾಗಣಪತಿ ಹೋಮ, ನವಗ್ರಹ ಹೋಮ, ಶೈಲಪುತ್ರಿ ಆರಾಧನೆ, ಚಂಡಿಕಾ ಹೋಮ, ಸುಮಂಗಲಿ, ಕನ್ನಿಕಾಪೂಜೆ, 1.30 ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸಂಜೆ 6.30 ರಿಂದ ದುರ್ಗಾದೀಪ ನಮಸ್ಕಾರ, ದುರ್ಗಾಸಪ್ತಶತಿ ಪಾರಾಯಣ, ದೀಪರಾಧನೆ, ಅಷ್ಟಾವಧಾನ ಸೇವೆ, 8.30 ಕ್ಕೆ ಪ್ರಸಾದ ವಿನಿಯೋಗ ನಡೆಯಲಿದೆ.

## ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಇಂದು

ದಾವಣಗೆರೆ ಬಾಪೂಜಿ ಮಕ್ಕಳ ಆಸ್ಪತ್ರೆಯಲ್ಲಿ ಇಂದು ಮಧ್ಯಾಹ್ನ 3.30 ಗಂಟೆಗೆ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ 'ಹೆಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮ ವೈರಸ್) ಲಸಿಕೆ-ಗರ್ಭಕೋಶದ ಕ್ಯಾನ್ಸರ್ ನಿವಾರಣೆಯಲ್ಲಿ ದಶಕದ ಆವಿಷ್ಕಾರ' ವಿಷಯ ಕುರಿತು ಸ್ತ್ರೀರೋಗ ತಜ್ಞೆ ಡಾ.ಪ್ರೇಮಾ ಪ್ರಭುದೇವ್ ಮಾತನಾಡುವರು.

## ಮಂಜುಳಾ ಭಂಡಾರೆ ನಿಧನ



ಹರಿಹರದ ಕಿರ್ಲೋಸ್ಕರ್ ಕಂಪನಿ ನಿವೃತ್ತ ನೌಕರರಾದ ಶ್ರೀ ರಾಜಣ್ಣ ಭಂಡಾರೆ ಅವರ ಧರ್ಮಪತ್ನಿ ಶ್ರೀಮತಿ ಮಂಜುಳಾ ಭಂಡಾರೆ ಅವರು ದಿನಾಂಕ : 02.10.2024 ರ ಬುಧವಾರ ಬೆಳಿಗ್ಗೆ 11.30 ಕ್ಕೆ ದಾವಣಗೆರೆ ವಿನೋಬನಗರ 3 ನೇ ಮುಖ್ಯ ರಸ್ತೆ, 8 ನೇ ತಿರುವಿನಲ್ಲಿರುವ ಅವರ ನಿವಾಸದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆ, ದಿ. ಸಿ. ಎಂ. ಬಾಬುರಾವ್ (ಸೊಸೈಟಿ ಬಾಬಣ್ಣ) ಸೇರಿದಂತೆ ಅಳಿಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 02.10.2024 ರ ಬುಧವಾರ ಸಂಜೆ 5.30 ಕ್ಕೆ ದಾವಣಗೆರೆ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನಡೆಯಿತು.

ದುಃಖತಪ್ತ ಕುಟುಂಬ ವರ್ಗ, 99004 54047

## ಆರನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಪ್ರೇಮ ಭತ್ತದ್**

ಲಿಂಗೈಕ್ಯ : 3-10-2018 (ನಿವೃತ್ತ ಉಪನ್ಯಾಸಕರು, ಎ.ವಿ.ಕೆ. ಕಾಲೇಜ್)

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ,

ಇಂತಿ ದುಃಖತಪ್ತರು :
ಪತಿ : ಸುರೇಶ್ ವೈ. ಅಥಣಿಕರ್ (ವಕೀಲರು)
ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು, ದಾವಣಗೆರೆ. 93410 14016

## ಶಾರದಾಂಬ ದೇವಿಗೆ ಜಗತ್ಪ್ರಸೂತಿ ಅಲಂಕಾರ



ಎಸ್. ನಿಜಲಿಂಗಪ್ಪ ಬಡಾವಣೆಯ ವರ್ತುಲ ರಸ್ತೆಯಲ್ಲಿರುವ ಶ್ರೀ ಗಣಪತಿ, ಶ್ರೀ ಶಾರದಾಂಬ, ಶ್ರೀ ಚಂದ್ರಮೌಳೀಶ್ವರ ಮತ್ತು ಶ್ರೀ ಶಂಕರಾಚಾರ್ಯ ದೇವಸ್ಥಾನದಲ್ಲಿ ಶರನ್ನವರಾತ್ರಿ ಪ್ರಯುಕ್ತ ಶಾರದಾಂಬ ದೇವಿಗೆ ಅಮವಾಸ್ಯೆ ಪ್ರಯುಕ್ತ ಶ್ರೀ ಜಗತ್ಪ್ರಸೂತಿ ಅಲಂಕಾರ ನೆರವೇರಿಸಲಾಯಿತು.

## ಜಗಳೂರು : ಟೆನ್ನಿಸ್ ರಾಷ್ಟ್ರೀಯ ತಂಡಕ್ಕೆ ತರುಣ್



ಜಗಳೂರು, ಅ. 2- ರಾಜ್ಯ ಟೆನ್ನಿಸ್ ಬಾಲ್ ಕ್ರಿಕೆಟ್ ಅಸೋಸಿಯೇಷನ್ ಮತ್ತು ತಮಿಳು ನಾಡು ದಕ್ಷಿಣ ವಲಯದ 19 ವರ್ಷದ ಒಳಗಿನ ರಾಷ್ಟ್ರೀಯ ತಂಡಕ್ಕೆ ನಗರದ ಆರ್.ವಿ.ಎಸ್ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿ ಆರ್.ತರುಣ್ ಕುಮಾರ್ ಆಯ್ಕೆಯಾಗಿದ್ದಾರೆ. ಇದೇ ದಿನಾಂಕ 5 ಮತ್ತು 6 ರಂದು ತಮಿಳುನಾಡಿನ ಕೊಯಮತ್ತೂರಿನಲ್ಲಿ ಪಂದ್ಯಾವಳಿಗಳು ನಡೆಯಲಿವೆ.


## ಸಾಧು ವೀರಶೈವ ಸಮಾಜ, ಹರಿಹರ ತಾಲ್ಲೂಕು

ವಿಷಯ : ಶ್ರದ್ಧಾಂಜಲಿ ಕಾರ್ಯಕ್ರಮದ ಲೆಕ್ಕ ಪತ್ರದ ಮಾಹಿತಿ ನೀಡುವ ಬಗ್ಗೆ


ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜ ಬಾಂಧವರಿಗೆ ತಿಳಿಸುವುದೇನೆಂದರೆ, ದಿನಾಂಕ : 14.09.2024 ರಂದು ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಭಕ್ತಿ ಸಮರ್ಪಣೆ ಮಾಡಿದ ಬಗ್ಗೆ ಲೆಕ್ಕ ಪತ್ರ ಪರಿಶೀಲನೆಗಾಗಿ ದಿನಾಂಕ : 04.10.2024ರ ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ ಸಮಾಜದ ಅಧ್ಯಕ್ಷರಾದ ಗೌಡ್ರ ಮಹದೇವಪ್ಪ ಇವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದೆ. ಆದ್ದರಿಂದ ಸಮಾಜದ ಸರ್ವ ಸದಸ್ಯರು ಹಾಗೂ ಸಮಾಜದ ಎಲ್ಲಾ ಬಾಂಧವರು ಸಕಾಲಕ್ಕೆ ತಪ್ಪದೇ ಈ ಸಭೆಯಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಸ್ಥಳ : ಶ್ರೀ ತರಳಬಾಳು ಜಗದ್ಗುರು ಪ್ರಾಥಮಿಕ ಮತ್ತು ಪ್ರೌಢಶಾಲೆ, ಮಹಜೇನಹಳ್ಳಿ, ಹರಿಹರ.

ಇಟಗಿ ಶಿವಣ್ಣ ನಿಟ್ಟೂರು, ಕಾರ್ಯದರ್ಶಿ, (94489 66068)



## ವಿದೇಶ ಪ್ರಯಾಣ - ಶುಭ ಹಾರೈಕೆಗಳು



ದಿನಾಂಕ : 03.10.2024ರ ಗುರುವಾರದಂದು
ಹರಪನಹಳ್ಳಿ ತಾಲ್ಲೂಕಿನ ಹಲುವಾಗಲು ಗ್ರಾಮದ
ರೈತ ಸಂಘದ ಮಾಜಿ ಅಧ್ಯಕ್ಷರು
ಆರ್.ಎಸ್.ಎಸ್.ಎನ್. ಸಹಕಾರ ಸಂಘದ ಮಾಜಿ ಅಧ್ಯಕ್ಷರು
ಹಾಲಿ ಸದಸ್ಯರು ಹರಪನಹಳ್ಳಿ ತಾಲ್ಲೂಕು
ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷರಾದ

**ಶ್ರೀ ಹೆಚ್.ಟಿ. ಗಿರೀಶಪ್ಪ**

ಮತ್ತು ಧರ್ಮಪತ್ನಿ

**ಶ್ರೀಮತಿ ಎಚ್.ಟಿ. ರೇಣುಕಮ್ಮ**

ಹಲುವಾಗಲು ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಇವರು ಅಮೆರಿಕ ಪ್ರವಾಸ ಕೈಗೊಳ್ಳಲಿದ್ದು, ಇವರ ಪ್ರವಾಸ ಸುಖಮಯವಾಗಿ ಯಶಸ್ವಿಯಾಗಲೆಂದು ಶುಭ ಹಾರೈಸುತ್ತೇವೆ.

ಶುಭ ಕೋರುವವರು :



ವೈ.ಡಿ. ಅಣ್ಣಪ್ಪ, ಅಧ್ಯಕ್ಷರು, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ, ಹರಪನಹಳ್ಳಿ.


ಕೆ. ಪರಶುರಾಮಪ್ಪ, ಮಾಜಿ ಅಧ್ಯಕ್ಷರು ತಾ. ವಾಲ್ಮೀಕಿ ನಾಯಕ ಸಮಾಜ, ಹರಪನಹಳ್ಳಿ.


ಶಿರಹಟ್ಟಿ ದಂಡೆಪ್ಪ, ಮಾಜಿ ಅಧ್ಯಕ್ಷರು ತಾ. ವಾಲ್ಮೀಕಿ ನಾಯಕ ಸಮಾಜ, ಹರಪನಹಳ್ಳಿ.


ಟಿ. ವೆಂಕಟೇಶ್ ವಕೀಲರು, ಹರಪನಹಳ್ಳಿ.


ಕೋಡಿಹಳ್ಳಿ ಭೀಮಪ್ಪ ಪ್ರಗತಿಪರ ಮುಖಂಡರು, ಹರಪನಹಳ್ಳಿ


ಪಟ್ನಾಮದ ನಾಗರಾಜ್ ವಾಲ್ಮೀಕಿ ಸಮಾಜದ ಮುಖಂಡರು, ಹರಪನಹಳ್ಳಿ


ಬಸವರಾಜ್ ಎಸ್., ಜಿಲ್ಲಾ ಅಧ್ಯಕ್ಷರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ವಿಜಯನಗರ. (ಜಿ)


ಡಾ|| ಎಂ. ಸುರೇಶ್. ವಕೀಲರು, ಅರಸಿಕೆರೆ.


ಪಟ್ನಾಮದ ಕೊಟ್ರೇಶ್ ವಾಲ್ಮೀಕಿ ಸಮಾಜದ ಮುಖಂಡರು, ಹರಪನಹಳ್ಳಿ

ಮಕ್ಕಳಾದ :
ಎನ್.ಜೆ. ಜ್ಞಾನೇಶ್ವರ
ಎನ್.ಜೆ. ಅಶೋಕ್‌ಕುಮಾರ್
ಎನ್.ಜೆ. ಪುನರ್ವಸು
ಸೊಸೆಯಂದಿರಾದ :
ಜೀವಿತ, ಶೀಲಾ
ಮೊಮ್ಮಕ್ಕಳಾದ :
ಖುಷಿ, ಕುಶಾಲ್, ಸಂಚಿತ್, ಸಿಂಚನ ಹಾಗೂ
ಬಂಧು-ಮಿತ್ರರು,
ಹಲುವಾಗಲು, ಹರಪನಹಳ್ಳಿ.








## ಶ್ರದ್ಧಾಂಜಲಿ



ನಮ್ಮೆಲ್ಲರ ಆತ್ಮೀಯ, ಅಜಾತ ಶತ್ರು, ಹಿರಿಯ ಗುತ್ತಿಗೆದಾರರಾದ

**ಶ್ರೀ ರಾಜುರೆಡ್ಡಿ**



ನಮ್ಮೆಲ್ಲರ ಸ್ನೇಹಿತರಾದ ಕೆ. ಶಶಿಧರ ಇವರ ಧರ್ಮಪತ್ನಿ

**ಶ್ರೀಮತಿ ಭಾನುಮತಿ**

ಇವರ ಆತ್ಮಕ್ಕೆ ಚಿರಶಾಂತಿ ಕೋರುವ

**ಎಸ್.ಎಸ್. ಮಲ್ಲಿಕಾರ್ಜುನ್**, ಸಚಿವರು

| | |
|---|---|
| ಆರ್.ಎಸ್. ಶೇಖರಪ್ಪ | ಡಿ. ಬಸವರಾಜ್ |
| ಆರ್.ಹೆಚ್. ನಾಗಭೂಷಣ್ | ದಿನೇಶ್ ಕೆ. ಶೆಟ್ಟಿ |
| ಶಿವಗಂಗಾ ಶ್ರೀನಿವಾಸ್ | ಸುರಭಿ ಶಿವಮೂರ್ತಿ |
| ತಿಪ್ಪೇಸ್ವಾಮಿ ಶಾಮನೂರು | ಡಾ. ರಮೇಶ್ |
| ಜಗದೀಶ್ ಮುದೇಗೌಡ್ರು | ಮಂಜುನಾಥ ಬಾಪೂಜಿ |
| ಚೈತನ್ಯ ಕುಮಾರ್ | ಡಾ. ಸೂಗ ರೆಡ್ಡಿ |
| ಡಾ. ಪ್ರಸನ್ನಕುಮಾರ್ | ರಾಮನಾಥ್ ಖಮಿತ್ಕರ್ |
| ವಿಠ್ಠಲ್ ಅಮಾಸಿ | ಮಂಜುನಾಥ ತಡಕನಹಳ್ಳಿ |
| ಅರುಣ್, ಕಲ್ಲೇಶ್ವರ ಮಿಲ್ | ಶಿವಣ್ಣ ಮರಬಸಣ್ಣನವರ್ |



॥ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಸನ್ನ ॥

## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ವಿಜಯಲಕ್ಷ್ಮಿ ಮತ್ತು ಡಾ. ಕೆ. ಶ್ರೀನಿವಾಸ ರೆಡ್ಡಿ, ರವಿ ನರ್ಸಿಂಗ್ ಹೋಂ, ದಾವಣಗೆರೆ ಇವರು ಮಾಡುವ ವಿಜ್ಞಾಪನೆಗಳು.

ನನ್ನ ಸಹೋದರ ಶ್ರೀ ಕೆ. ಶಶಿಧರ್ ಇವರ ಧರ್ಮಪತ್ನಿ

**ಶ್ರೀಮತಿ ಭಾನುಮತಿ**

ಇವರು, ದಿನಾಂಕ : 23.09.2024ನೇ ಸೋಮವಾರ ರಾತ್ರಿ 9ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಆತ್ಮಶಾಂತಿಗಾಗಿ ವೈಕುಂಠ ಸಮಾರಾಧನೆಯನ್ನು ದಿನಾಂಕ : 03.10.2024ನೇ ಗುರುವಾರ ಮಧ್ಯಾಹ್ನ 12.15ಕ್ಕೆ ಶಿವಗಂಗೆ ಕನ್ವೆನ್ಷನ್ ಸೆಂಟರ್‌ನ ಏಟ್ರಿಯಂ ಮಿನಿಹಾಲ್ ಕುಂದುವಾಡ ರಸ್ತೆ, ದಾವಣಗೆರೆ ಇಲ್ಲಿ ನಡೆಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

◆ಶ್ರೀಮತಿ ವಿಜಯಲಕ್ಷ್ಮಿ ಮತ್ತು ಡಾ. ಕೆ. ಶ್ರೀನಿವಾಸ ರೆಡ್ಡಿ
◆ಶ್ರೀಮತಿ ಯಶೋಧ ಮತ್ತು ಶ್ರೀ ಕೆ. ರಾಜಗೋಪಾಲ ರೆಡ್ಡಿ
◆ಶ್ರೀಮತಿ ಆಶಾ ಮತ್ತು ಡಾ. ಕೆ. ರವಿಕುಮಾರ್ ◆ಶ್ರೀ ಕೆ. ಶಶಿಧರ್ ಮತ್ತು
◆ಶ್ರೀಮತಿ ಸುಜಾತ ಮತ್ತು ಡಾ. ಡಿ.ಬಿ. ಧರ್ಮಾರೆಡ್ಡಿ
◆ಶ್ರೀಮತಿ ನಿರೀಕ್ಷ ಮತ್ತು ಶ್ರೀ ಮಧುಸೂದನ್ ◆ ಚಿ. ಕೆ.ಎಸ್. ನಿರ್ಮಿತ್
ರವಿ ನರ್ಸಿಂಗ್ ಹೋಂ, ನಂದಿ ಇಂಡಸ್ಟ್ರೀಸ್, ನಂದಿಗಾವಿ ಟ್ರೇಡರ್ಸ್, ಅಕ್ಕೇರ ವಂಶಸ್ಥರು, ಕೊನಕಿ ವಂಶಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ತಪ್ಪದೇ ಆಗಮಿಸಬೇಕಾಗಿ ಕೋರಿದೆ.


# ಸತ್ಯ, ಅಹಿಂಸೆ, ಸರ್ವೋದಯದ ಹರಿಕಾರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ

ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯ ಚಿಂತನೆಗಳು, ತತ್ವಗಳು, ಸಂಘಟನೆ, ತ್ಯಾಗ, ದೇಶಪ್ರೇಮ, ಚಳವಳಿಗಳು, ಸರ್ವೋದಯ ಪರಿಕಲ್ಪನೆ, ಸತ್ಯ-ಅಹಿಂಸೆಯ ಜೀವನ, ಶಾಂತಿ, ಸಹನೆ, ನೈತಿಕ ಶಕ್ತಿ, ಗ್ರಾಮೀಣ ಅಭ್ಯುದಯ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಧರ್ಮ ಸಹಿಷ್ಣುತೆ, ಸತ್ಯಾಗ್ರಹದ ಆಶಯ, ಸ್ವಾತಂತ್ರ್ಯಕ್ಕೆ ಜನರಲ್ಲಿ ಜಾಗೃತಿ, ಖಾದಿ ಪ್ರಚಾರ, ಮೂಲಶಿಕ್ಷಣ, ಆದಿವಾಸಿ ಕಲ್ಯಾಣ, ವಯಸ್ಕರ ಶಿಕ್ಷಣ ಮುಂತಾದ ಸಂಗತಿಗಳು ಗಾಂಧೀಜಿಯನ್ನು ಅಮರರನ್ನಾಗಿಸಿವೆ. ಅವರು ಬದುಕಿನಲ್ಲಿ ಅಳವಡಿಸಿಕೊಂಡ ಸರಳತೆ, ಸಜ್ಜನಿಕೆ, ದೂರದರ್ಶಿತ್ವ, ಗ್ರಾಮೀಣ ಪುನರ‍್ರಚನೆ, ಸಮಾನತೆ, ಮಹಿಳಾ ಸಬಲೀಕರಣ ಮಹತ್ವ ಪಡೆದಿವೆ. ಸ್ವಾತಂತ್ರ್ಯ ಹೋರಾಟದ ಮುಂಚೂಣಿಯ ನಾಯಕರಾಗಿದ್ದ ಇವರು ಭಾರತೀಯರ ಮನದಾಳದಲ್ಲಿ ಶಾಶ್ವತ ನೆಲೆಯೂರಿದ್ದಾರೆ. ಅಕ್ಟೋಬರ್ 2 ಅವರ ಜನ್ಮದಿನದ ಸವಿ ನೆನಪಿಗೆ ಅವರ ವ್ಯಕ್ತಿತ್ವದರ್ಶನ ಅಗತ್ಯವಾಗಿದೆ.

**ಜನನ, ವಿದ್ಯಾಭ್ಯಾಸ, ಕೌಟುಂಬಿಕ ಜೀವನ :** ಮೋಹನದಾಸ್ ಕರಮ್‌ಚಂದ್ ಗಾಂಧಿಯವರು 1869 ಅಕ್ಟೋಬರ್ 2 ರಂದು ಗುಜರಾತ್ ರಾಜ್ಯದ ಕರಾವಳಿ ಪಟ್ಟಣ ಪೋರ ಬಂದರಿನಲ್ಲಿ ಜನಿಸಿದರು. ತಂದೆ ಕರಮ್‌ಚಂದ್ ತಾಯಿ, ಪುತ್ಲಿಬಾಯಿ. ಪೋರಬಂದರಿನಲ್ಲಿ ಪ್ರಾಥಮಿಕ, ರಾಜಕೋಟ್‌ನಲ್ಲಿ ಪ್ರೌಢಶಾಲೆ, ಭಾವನಗರ್‌ನಲ್ಲಿ ಕಾಲೇಜು ವಿದ್ಯಾಭ್ಯಾಸದ ನಂತರ 1888 ರಲ್ಲಿ ಕಾನೂನು ಅಧ್ಯಯನಕ್ಕೆ ಇಂಗ್ಲೆಂಡಿಗೆ ತೆರಳಿ, 1891ರಲ್ಲಿ ಬ್ಯಾರಿಸ್ಟರ್ ಪದವಿ ಪಡೆದು ಭಾರತಕ್ಕೆ ಮರಳಿದರು. 1893 ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ತೆರಳಿ ಅಲ್ಲಿಯೇ 20 ವರ್ಷ ನೆಲೆಸಿ 1915 ರಲ್ಲಿ ಭಾರತಕ್ಕೆ ಬಂದರು. 1883 ರಲ್ಲಿಯೇ ಬಾಲ್ಯವಿವಾಹ. ಹರಿಲಾಲ್, ಮಣಿಲಾಲ್, ರಾಮದಾಸ್ ಮತ್ತು ದೇವದಾಸ್ ಎಂಬ ನಾಲ್ಕು ಗಂಡು ಮಕ್ಕಳ ಕೌಟುಂಬಿಕ ಜೀವನ.

**ಗಾಂಧೀಜಿಯ ಸತ್ಯ-ಅಹಿಂಸೆಯ ತತ್ವಗಳು :** ಗಾಂಧೀಜಿಯವರ ಜೀವನವೆಂದರೆ ಸತ್ಯ ಮತ್ತು ಅಹಿಂಸೆಗಳ ಭಾಷ್ಯವೆ ಸರಿ. ಸತ್ಯಕ್ಕೆ ಹಲವು ಮುಖಗಳಿವೆ. ಸತ್ಯದ ಸಮ್ಯಕ್ ದರ್ಶನವೇ ಆತ್ಮ ಸಾಕ್ಷಾತ್ಕಾರ. ಸತ್ಯ, ಅಹಿಂಸೆ ಒಂದು ನಾಣ್ಯದ ಎರಡು ಮುಖಗಳು. ಸತ್ಯವಿದ್ದಲ್ಲಿ ಜ್ಞಾನ, ಜ್ಞಾನವಿದ್ದಲ್ಲಿ ಸತ್ಯ. ಸತ್ಯವು ಭಾವ, ಕ್ರಿಯೆ ಮತ್ತು ಮಾತಿನಲ್ಲಿ ವ್ಯಕ್ತವಾಗಬೇಕು. ಸತ್ಯವೇ ನಮ್ಮ ಬದುಕಿನ ಉಸಿರಾಗಬೇಕು. ಮನದಲ್ಲಿ, ನಡೆಯಲ್ಲಿ, ನುಡಿಯಲ್ಲಿ ಸತ್ಯ ಪಾಲಿಸಬೇಕೆಂಬುದು ಗಾಂಧೀಜಿಯವರ ಆಶಯ. ಅಹಿಂಸೆ ಮನಸ್ಸಿನ ಒಂದು ವೃತ್ತಿಯಾಗಿದೆ. ಕೋಪ, ಅಹಿಂಸೆಯ ಶತ್ರು, ಅಹಿಂಸೆಯ ಆಚರಣೆಯಲ್ಲಿ ಪ್ರೇಮ, ತ್ಯಾಗ, ಸಹನೆ, ಮತ್ತು ಧೈರ್ಯ ಎಂಬ ಅಂಶಗಳಿವೆ. ಅಹಿಂಸೆಯ ತತ್ವ ಅಷ್ಟು ಸುಲಭವಾಗಿ ಬರಲಾರದು. ಯೋಗ್ಯ ಶಿಕ್ಷಣ, ಸಂಸ್ಕಾರ ಬೇಕು. ಸತ್ಯ ಪರಮಧರ್ಮ, ಅಹಿಂಸೆ ಪರಮ ಕರ್ತವ್ಯ, ಅಹಿಂಸೆಗೆ ಸೋಲಿಲ್ಲ. ಅದೊಂದು ನೈತಿಕ ಶಕ್ತಿ. ಹೀಗಾಗಿ ಅಹಿಂಸೆ ಮತ್ತು ಸತ್ಯ ಮಾನವ ಧರ್ಮವಾಗಬೇಕು ಎಂಬುದು ಅವರ ಪರಮ ವಿಚಾರವಾಗಿತ್ತು.

**ಗಾಂಧೀಜಿಯವರ ಸರ್ವೋದಯದ ಪರಿಕಲ್ಪನೆ :** ಸರ್ವೋದಯ ಗಾಂಧೀಜಿಯವರ ಪ್ರಬುದ್ಧ ಚಿಂತನೆ. ಸರ್ವರ ಉದಯವೇ ಸರ್ವೋದಯ. ಸರ್ವರ ಪ್ರಗತಿ, ಅಭ್ಯುದಯ ಇದರ ಆಶಯ. ಜಾನ್ ರಸ್ಕಿನ್‌ರ 'ಅನ್ ಟು ದಿಸ್ ಲಾಸ್ಟ್' ಎಂಬ ಕೃತಿಯನ್ನು ಓದಿದ ಗಾಂಧೀಜಿಗೆ ಜೀವನದಲ್ಲಿ ಮಹತ್ತರ ಬದಲಾವಣೆಗಳಾದವು. ಅವರ ತತ್ವಗಳು ಪ್ರಭಾವ ಬೀರಿದವು. ಸರ್ವೋದಯ ಸಮಾಜ ಸ್ಥಾಪಿಸಲು ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರು. ಅವುಗಳೆಂದರೆ, ಖಾದಿಯ ಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಗ್ರಾಮ ನೈರ್ಮಲ್ಯ, ಮೂಲ ಶಿಕ್ಷಣ, ವಯಸ್ಕರ ಶಿಕ್ಷಣ, ವ್ಯವಸಾಯ ಅಭಿವೃದ್ಧಿ, ಕುಷ್ಟರೋಗಿಗಳ ಉಪಚಾರ, ಆದಿವಾಸಿ ಕಲ್ಯಾಣ, ಕಾರ್ಮಿಕರ ಸಂಘಟನೆ, ಸ್ತ್ರೀ-ಪುರುಷರ ಹಕ್ಕುಗಳ ಸಮಾನತೆ, ಪ್ರಾಮಾಣಿಕ ಜೀವನ, ರಾಷ್ಟ್ರಭಾಷೆ, ಮಾತೃಭಾಷೆ ಮತ್ತು ಸಂಪರ್ಕ ಭಾಷೆ, ಧರ್ಮ ಸಹಿಷ್ಣುತೆಯ ಆಶಯವೇ ಸರ್ವೋದಯ ಪರಿಕಲ್ಪನೆ ಗಾಂಧೀಜಿಯ ಸಾಮಾಜಿಕ ತತ್ವಜ್ಞಾನವಾಗಿದೆ.



**ಗಾಂಧೀಜಿಯವರ ಗ್ರಾಮೀಣ ಪುನರ್‌ರಚನೆ :** ದಕ್ಷಿಣ ಆಫ್ರಿಕಾದಿಂದ ಗಾಂಧೀಜಿ 1915 ರಲ್ಲಿ ಭಾರತಕ್ಕೆ ಬಂದಾಗ ಗ್ರಾಮಗಳ ಬಗೆಗೆ ಆಳವಾದ ಪರಿಚಯ ಇರಲಿಲ್ಲ. ಗೋಖಲೆ ಮಾರ್ಗದರ್ಶನದಂತೆ ಭಾರತದಾದ್ಯಂತ ಸುತ್ತಾಡಿ ಗ್ರಾಮಗಳ ವಾಸ್ತವಿಕ ಸ್ಥಿತಿ ಅರಿತರು. ಜನರ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಕಂಡು ಗ್ರಾಮಗಳ ಪುನರ್ ರಚನೆಗೆ ಆದ್ಯತೆ ನೀಡಿದರು. ಸಹಕಾರ-ಸೌಹಾರ್ದತೆಯಿಂದ ಗ್ರಾಮ ಸ್ವರಾಜ್ಯ ಸ್ಥಾಪಿಸಬೇಕು. ಗ್ರಾಮ ಸಭೆ, ಗ್ರಾಮ ಪಂಚಾಯಿತಿ ಮೂಲಕ ಗ್ರಾಮ ಸ್ವರಾಜ್ಯ ಸ್ಥಾಪಿಸುವ ಆಶಯದೊಂದಿಗೆ ಭೂಮಿಯ ಪುನರ್ ಹಂಚಿಕೆ, ಭೂರಹಿತರಿಗೆ ಭೂಮಿ, ಗೋಮಾಳ, ದೇವಾಲಯ, ಆಟದ ಮೈದಾನ, ಶಾಲೆ, ಮನರಂಜನೆಯ ಸ್ಥಳ, ರಂಗ ಮಂದಿರ, ಸಭಾಭವನ, ಮುಂತಾದವುಗಳಿಗೆ ಭೂಮಿ ನೀಡುವುದು. ಗ್ರಾಮ ಪಂಚಾಯಿತಿ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸಬೇಕೆಂದು ತಿಳಿಸಿ, ಪ್ರತಿಯೊಬ್ಬರೂ ಸಾಕ್ಷರರಾಗಬೇಕು. ಜೀವನ ಮೌಲ್ಯಗಳಾದ ಪ್ರೀತಿ, ವಿಶ್ವಾಸ, ಸಹನೆ, ಅನುಕಂಪ ಮೈಗೂಡಿಸಿಕೊಂಡು ಬದುಕಲು ಆರೋಗ್ಯ ಶಿಕ್ಷಣ, ಮೂಲ ಶಿಕ್ಷಣ, ಉದ್ಯೋಗ ಕೇಂದ್ರಿತ ಶಿಕ್ಷಣದ ಅವಶ್ಯಕತೆಯನ್ನು ತಿಳಿಸಿ, ಪ್ರತಿಯೊಬ್ಬರು ಗ್ರಾಮದ ಒಳಿತಿಗಾಗಿ ಶ್ರಮಿಸಬೇಕು. ಇದರಿಂದ ಗ್ರಾಮೀಣ ಪುನರ್‌ರಚನೆ ಸಾಧ್ಯವೆಂದು ತಿಳಿಸಿದರು.

**ಗಾಂಧೀಜಿಯವರ ಮೂಲ ಶಿಕ್ಷಣದ ಆಶಯ :** ಮೂಲ ಶಿಕ್ಷಣದ ಸೃಜನಾತ್ಮಕ ಪರಿಕಲ್ಪನೆ ಕೈಕೆಲಸದ ಮೂಲಕ ಮಗುವಿನ ದೈಹಿಕ, ಬೌದ್ಧಿಕ, ಮತ್ತು ನೈತಿಕ ಅಭಿವೃದ್ಧಿಯೇ ಮೂಲ ಶಿಕ್ಷಣದ ಗುರಿ. ಸಾಕ್ಷರತೆ ಶಿಕ್ಷಣದ ಕೊನೆಯೂ ಅಲ್ಲ, ಆರಂಭವೂ ಅಲ್ಲ. ಎಲ್ಲರೂ ಶಿಕ್ಷಣ ಪಡೆಯುವುದು ಒಂದು ದಾರಿ ಅಷ್ಟೇ. ಆದ್ದರಿಂದ ಮಗುವಿಗೆ ಕೈಕಸುಬು ಹೇಳಿಕೊಟ್ಟು, ಅದು ತನ್ನ ತರಗತಿಯ ಜೊತೆಯಲ್ಲೇ ಉತ್ಪಾದನೆ ತಿಳಿಸುವ, ಕಲಿಯುವ ಮಗುವಿನ ಶಿಕ್ಷಣ ಆರಂಭಿಸಬೇಕು. ಅಂತಹ ಶಿಕ್ಷಣ ಪದ್ಧತಿಯಲ್ಲಿ ಮನಸ್ಸು, ಆತ್ಮಗಳ ಅತ್ಯುನ್ನತ ಬೆಳವಣಿಗೆ ಸಾಧ್ಯ ಎಂದರು. ಶಿಕ್ಷಣವು ಸಾಧ್ಯವಾಗಬೇಕಾದರೆ, ಸ್ವಯಂ ನಿರ್ಭರವಾಗಬೇಕು. ಶಿಕ್ಷಣವು ಮಾತೃಭಾಷೆಯಲ್ಲಿ ಇರಬೇಕು. ಒಳ್ಳೆಯ ಶೀಲವನ್ನು ರೂಪಿಸದೇ ಇದ್ದ ಶಿಕ್ಷಣಕ್ಕೆ ಬೆಲೆ ಇಲ್ಲ. ಭಾರತದ ಶಿಕ್ಷಣ ನೀತಿ ಮತ್ತು ರಚನೆ, ಪಾಶ್ಚಿಮಾತ್ಯ ಶೈಲಿಯ ಅಕ್ಷರಜ್ಞಾನ, ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣವನ್ನೇ ಪ್ರತಿಪಾದಿಸುತ್ತದೆಯೇ ಹೊರತು ಗಾಂಧೀಜಿಯ ಮೂಲ ಶಿಕ್ಷಣದ ಪ್ರಭಾವ ಅತ್ಯಲ್ಪ. ಗುಜರಾತ್ ವಿದ್ಯಾಪೀಠ, ಮಧುರೈ ಬಳಿಯ ಗಾಂಧಿ ಗ್ರಾಮ ವಿಶ್ವವಿದ್ಯಾನಿಲಯಗಳು, ಗಾಂಧೀಜಿ ಕಲ್ಪನೆಯನ್ನು ಜೀವಂತವಾಗಿ ಉಳಿಸಿಕೊಂಡಿವೆ. ಭಾರತದಲ್ಲಿ 125ಕ್ಕೂ ಹೆಚ್ಚು ವಿ.ವಿ. ಗಳಲ್ಲಿ ಗಾಂಧಿ ಅಧ್ಯಯನ ಕೇಂದ್ರಗಳಿವೆ.

**ಗಾಂಧೀಜಿಯ ಸತ್ಯಾಗ್ರಹ ಆಶ್ರಮ, ಚಳುವಳಿಗಳು :** ಭಾರತದಲ್ಲಿ ಗಾಂಧೀಜಿ ತಮ್ಮ ಮೊದಲ ಆಶ್ರಮವನ್ನು 1915 ಮೇ 25 ರಂದು ಅಹಮದಾಬಾದ್ ಸಮೀಪದ 'ಸಾಬರಮತಿ' ನದಿ ತೀರದ ಪಕ್ಕದಲ್ಲಿದ್ದ ಕೊಚ್ರಾಬ್ ಪ್ರದೇಶದಲ್ಲಿ ಸ್ಥಾಪಿಸಿದರು. ಇದಕ್ಕೆ ನಿವೇಶನವನ್ನು ಜೀವನಲಾಲ್ ದೇಸಾಯಿ ಎಂಬ ಬ್ಯಾರಿಸ್ಟರ್ ನೀಡಿದರು. ಮಂಗಳದಾಸ್, ಗಿರಿಧರದಾಸ್ ಎಂಬ ಸಿರಿವಂತರಿಬ್ಬರು ಗಾಂಧೀಜಿ ಸ್ಥಾಪಿಸುವ ಆಶ್ರಮದ ಖರ್ಚು-ವೆಚ್ಚಗಳನ್ನು ಭರಿಸುವುದಾಗಿ ಹೇಳಿದ್ದರು. ಆಶ್ರಮಕ್ಕೆ 'ಸತ್ಯಾಗ್ರಹ ಆಶ್ರಮ' ಎಂದು ಹೆಸರಿಸಲಾಯಿತು. ಗಾಂಧೀಜಿಯವರು ನಡೆಸಿದ ಚಳವಳಿ ಮತ್ತು ಸತ್ಯಾಗ್ರಹಗಳೆಂದರೆ ಚಂಪಾರಣ್ ಸತ್ಯಾಗ್ರಹ, ಗಿರಣಿ ಕಾರ್ಮಿಕರ ಮುಷ್ಕರ , ಖೇಡಾ ಸತ್ಯಾಗ್ರಹ, ರೌಲೆಟ್ ಕಾಯಿದೆ ಹೋರಾಟ, ಜಲಿಯನ್ ವಾಲಾಬಾಗ್ ಹತ್ಯಾಕಾಂಡ, ಖಿಲಾಫತ್ ಚಳುವಳಿ, ಅಸಹಕಾರ ಚಳುವಳಿ, ಬರ್ಡೋಲಿ ಸತ್ಯಾಗ್ರಹ, ದಂಡಿಯಾತ್ರೆ, ಭಾರತ ಬಿಟ್ಟು ತೊಲಗಿ ಮುಂತಾದ ಚಳವಳಿಗಳಿಂದ ಭಾರತೀಯರನ್ನು ಜಾಗೃತ ಗೊಳಿಸಿದರು. ದೇಶಕ್ಕೆ ಸ್ವಾತಂತ್ರ್ಯ ಕೊಡಿಸುವಲ್ಲಿ ಅಮೋಘ ನಾಯಕ ಮಹಾತ್ಮರಾದರು.

**ಗಾಂಧೀಜಿ ಸತ್ಯಾಗ್ರಹದ ತತ್ವ-ನಿಯಮಗಳು :** ಸತ್ಯಾಗ್ರಹ ತತ್ವ ಮತ್ತು ನಿಯಮಗಳು ಗಾಂಧೀಜಿ ಜಗತ್ತಿಗೆ ಕೊಟ್ಟ ಮಹತ್ವದ ಕಾಣಿಕೆ. ಸತ್ಯಕ್ಕಾಗಿ ಅಹಿಂಸಾತ್ಮಕವಾಗಿ ನಡೆಸುವ ಆಗ್ರಹ, ಒತ್ತಾಯ, ಹೋರಾಟವೇ ಸತ್ಯಾಗ್ರಹ. ಸತ್ಯಾಗ್ರಹವೆಂಬ ತಂತ್ರವನ್ನು ಬಳಸಿ ಅನ್ಯಾಯದ ವಿರುದ್ಧ ಸತ್ಯಕ್ಕಾಗಿ, ನ್ಯಾಯಕ್ಕಾಗಿ ಹೋರಾಡಿದರು. ಇದು ಗಾಂಧೀಜಿಯವರ ಅವಿರತ ಪರಿಶ್ರಮ ಹಾಗೂ ಪ್ರಯೋಗದಿಂದ ಮಹತ್ವದ ಸಾಧನೆಯಾಗಿ ದೇಶದ ರಾಷ್ಟ್ರೀಯ ವಿಮೋಚನಾ ಆಂದೋಲನದಲ್ಲಿ ಅಸ್ತ್ರವಾಗಿ ಪರಿಣಮಿಸಿತು. ದಕ್ಷಿಣ ಆಫ್ರಿಕಾದಲ್ಲಿ 1906 ರಲ್ಲಿ ಚಳವಳಿಗೆ ರಸ್ಕಿನ್, ಟಾಲ್‌ಸ್ಟಾಯ್, ಥೋರೋ, ರಾಯಿಚಂದಬಾಯ, ಬರಹಗಳು ಮತ್ತು ಭಗವದ್ಗೀತೆ, ಉಪನಿಷತ್, ಕುರಾನ್, ಬೈಬಲ್‌ಗಳ ಅಧ್ಯಯನದಿಂದ ಪ್ರೇರಣೆ ಎಂಬುದು ಗಾಂಧೀಜಿಯ ಅಭಿಮತ. ಸತ್ಯಾಗ್ರಹಿಯು ಅನುಸರಿಸುವ 'ಏಳು' ಗುಣಗಳ ಕುರಿತು ಹೀಗೆ ಹೇಳಿದ್ದಾರೆ. ಸತ್ಯದಲ್ಲಿ ಅಚಲ ವಿಶ್ವಾಸ, ನಂಬಿಕೆ, ಪರಿಶುದ್ಧ ಜೀವನ, ಖಾದಿ ಬಟ್ಟೆ ಧಾರಣೆ, ಮದ್ಯಪಾನ ನಿಷೇಧ, ಆತ್ಮಗೌರವಕ್ಕೆ ಚ್ಯುತಿ ಬರದಂತೆ ಇರುವುದು. ಸತ್ಯ-ಅಹಿಂಸೆ ಸತ್ಯಾಗ್ರಹಿಯ ಗುರಿಯಾಗಿರಬೇಕು. ಕಾರಾಗೃಹದ ನಿಯಮಗಳನ್ನು ಪಾಲಿಸಬೇಕೆಂಬುದಾಗಿದೆ. ಸತ್ಯಾಗ್ರಹವು ಹಲವು ರೂಪಗಳನ್ನು ಹೊಂದಿದೆ. ಅಸಹಕಾರ, ಹರತಾಳ, ಬಹಿಷ್ಕಾರ, ಕಾಯ್ದೆಭಂಗ, ಉಪವಾಸ, ಹಿಜ್ರತ್, ಮುಷ್ಕರ, ಪಿಕೆಟಿಂಗ್ ಆಗಿದೆ. ಸಾಮಾಜಿಕ ಏಳ್ಗೆ ಮತ್ತು ಸುಖೀ ರಾಜ್ಯದ ಸ್ಥಾಪನೆಗೆ ಕಾರ್ಯರೂಪಕ್ಕಿರಬೇಕೇ ಹೊರತು ಸ್ವಾರ್ಥಕ್ಕೆ ಅಧಿಕಾರ ದಾಹಕ್ಕಾಗಿ ಇದನ್ನು ಉಪಯೋಗಿಸ ಕೂಡದು ಎಂಬುದು ಗಾಂಧೀಜಿಯ ದೃಢ ಸಂಕಲ್ಪವಾಗಿದೆ.

ಭಾರತದ ಸ್ವಾತಂತ್ರ್ಯ ಹೋರಾಟದ ಧ್ರುವತಾರೆ, ಸತ್ಯ, ಅಹಿಂಸೆ, ಶಾಂತಿ, ಆದರ್ಶ ತತ್ವಗಳಿಂದಾಗಿ ಮಹಾಪುರುಷರ ಸಾಲಿಗೆ ಸೇರಿದ ಗಾಂಧೀಜಿಯನ್ನು 'ಮಹಾತ್ಮಾ ಗಾಂಧಿ' ಎಂಬ ಗೌರವ ಸೂಚಕ ಪದವನ್ನು ಮೊದಲು ನೀಡಿದ್ದು, ರವೀಂದ್ರನಾಥ್ ಟ್ಯಾಗೂರರು. ಅವರನ್ನು 'ರಾಷ್ಟ್ರಪಿತ' ಎಂದು ಅವರ ಜನ್ಮ ದಿನವಾದ ಅಕ್ಟೋಬರ್ 2 ರಂದು ಸುಭಾಷ್ ಚಂದ್ರಭೋಸ್ ಜುಲೈ-6, 1944 ರಂದು ಕರೆದರು. ರಾಷ್ಟ್ರೀಯ ರಜಾದಿನ ಮತ್ತು ಅಂತರರಾಷ್ಟ್ರೀಯ ಅಹಿಂಸಾ ದಿನವನ್ನಾಗಿ ಆಚರಿಸಲಾಗುತ್ತಿದೆ.




- ಡಾ. ಗಂಗಾಧರಯ್ಯ ಹಿರೇಮಠ,
ವಿಶ್ರಾಂತ ಪ್ರಾಧ್ಯಾಪಕರು,
ದಾವಣಗೆರೆ.
ಮೊ : 9880093613

# ಸರಳ, ಪ್ರಾಮಾಣಿಕ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀಜಿ

ಅಕ್ಟೋಬರ್ 2 ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನವೂ ಹೌದು. ಆದರೆ ಗಾಂಧೀಜಿಯವರನ್ನು ಆದರಿಸುವ ಭರ ದಲ್ಲಿ ಜನರು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಆಚರಿಸುವುದೇ ಇಲ್ಲ. ಎಲ್ಲೋ ಬೆರಳೆಣಿಕೆಯಷ್ಟು ಜನ ಅವರನ್ನು ನೆನೆಯುತ್ತಾರೆ. ಬಾಲ್ಯದಿಂದಲೂ ಕಡು ಬಡತನದಲ್ಲಿ ಬೆಳೆದು, ಬ್ರಿಟಿಷರ ವಿರುದ್ಧ ಹೋರಾಡಿ 9 ವರ್ಷ ಸೆರೆವಾಸ ಅನುಭವಿಸಿದರು. ಸತ್ಯಸಂದರು, ಸರಳ - ಪ್ರಾಮಾಣಿಕ ವ್ಯಕ್ತಿ. ಕುಳ್ಳಗಿನ, ತೆಳ್ಳಗಿನ ದೇಹ. ಪ್ರಶಾಂತವಾದ ಮುಖ ಮುದ್ರೆ ಇವರದಾಗಿತ್ತು.

ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಶಾರದಾ ಪ್ರಸಾದ್ ಹಾಗೂ ರಾಮ್ದುಲಾರಿ ದೇವಿ ದಂಪತಿಯ ಮಗನಾಗಿ 1904 ಅಕ್ಟೋಬರ್ 2ರಂದು ಉತ್ತರ ಪ್ರದೇಶದ ರುದ್ರ ಪ್ರಯಾಗದಲ್ಲಿ ಜನಿಸಿದರು. ಇವರ ತಂದೆ ಒಬ್ಬ ಶಾಲಾ ಶಿಕ್ಷಕರಾಗಿದ್ದರು ಮತ್ತು ಶಾಸ್ತ್ರಿಯವರು ಒಂದೂವರೆ ವರ್ಷದವರಾಗಿರುವಾಗಲೇ ಅವರು ತೀರಿಕೊಂಡರು. ಗಾಂಧೀಜಿ ತನ್ನ ದೇಶದ ನಾಗರಿಕರನ್ನು ಅಸಹಕಾರ ಚಳುವಳಿಗೆ ಸೇರಲು ಕರೆ ನೀಡಿದ ಸಂದರ್ಭದಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರಿಗೆ ಕೇವಲ ಹದಿನಾರು ವರುಷ ವಯಸ್ಸು. ಮಹಾತ್ಮಾ ಅವರ ಕರೆಗೆ ಪ್ರತಿಕ್ರಿಯೆಯಾಗಿ ತನ್ನ ಓದನ್ನು ಬಿಟ್ಟು ಚಳುವಳಿಗೆ ಸೇರಲು ಶಾಸ್ತ್ರಿ ಅವರು ನಿರ್ಧರಿಸಿದರು.

ಎಳವೆಯಿಂದಲೇ ನಾನಾ ಕಷ್ಟಗಳನ್ನು ಎದುರಿಸಿದ ಶಾಸ್ತ್ರೀಜಿ ಬಾಲಕನಾಗಿದ್ದಾಗ ಅವರು ಒಂದು ದಿನ ಗಂಗಾ ನದಿಯನ್ನು ದಾಟಿ ಮತ್ತೊಂದು ತೀರಕ್ಕೆ ಹೋಗಬೇಕಾಗಿತ್ತು. ಅಲ್ಲಿ ದೋಣಿಯು ಇತ್ತು ಅಂಬಿಗ ಜನರನ್ನೆಲ್ಲಾ ದೋಣಿಯಲ್ಲಿ ನದಿ ದಾಟಿಸುತ್ತಿದ್ದ. ಲಾಲ್ ಬಹದ್ದೂರ್‌ಶಾಸ್ತ್ರಿ ಅವರು ದೋಣಿಯಲ್ಲಿ ಕುಳಿತರು ಅಂಬಿಗ ನದಿ ದಾಟಿಸಲು ಐದು ಪೈಸೆ ಕೇಳಿದ ಶಾಸ್ತ್ರೀಯವರ ಬಳಿ ಎರಡು ಪೈಸೆ ಮಾತ್ರ ಇತ್ತು, ಅಂಬಿಗ ಒಪ್ಪಲಿಲ್ಲ. ದೋಣಿಯಿಂದ ಇಳಿದ ಹತ್ತು ವರ್ಷದ ಬಾಲಕ ಶಾಸ್ತ್ರಿ ತುಂಬಿ ಹರಿಯುತ್ತಿದ್ದ ಎಂಥ ನುರಿತ ಈಜುಗಾರರು ಈಜಲು ಅಂಜುವ ಗಂಗಾನದಿಗೆ ಧುಮುಕಿ ಈಜಿ ಸುರಕ್ಷಿತವಾಗಿ ದಡ ಸೇರಿಯೇ ಬಿಟ್ಟ. ಮತ್ತೆಂದು ಅವರು ದೋಣಿ ಹತ್ತಲಿಲ್ಲ. ಈಜಿಕೊಂಡೇ ನದಿ ದಾಟುತ್ತಿದ್ದರು.



'ಜೈ ಜವಾನ್ ಜೈ ಕಿಸಾನ್' ಎಂಬ ಘೋಷಣೆಯ ಮೂಲಕ ದೇಶದ ಅಭಿವೃದ್ಧಿಗೆ ಹೊಸ ಆಯಾಮ ನೀಡಿದ ಮಹಾನ್ ಚೇತನ ಇವರು. ದೇಶ ಕಂಡ ಅಪರೂಪದ ಪ್ರಧಾನಿ. ಭಾರತಕ್ಕೆ ಕೇವಲ 17 ತಿಂಗಳು ಪ್ರಧಾನಿಯಾಗಿದ್ದ ಶಾಸ್ತ್ರಿಯವರ ಕೊಡುಗೆ ಅವಿಸ್ಮರಣೀಯ. ಇಡೀ ದೇಶವನ್ನು ಇವರು ಸ್ವಾಭಿಮಾನಿ ಯನ್ನಾಗಿ ಮಾಡಿದರು. ಇವರ ಆಡಳಿತ ಅವಧಿಯಲ್ಲಿ ಬರಗಾಲ ಬಂತು.

ಹೊರದೇಶದಿಂದ ಆಹಾರವನ್ನು ಆಮದು ಮಾಡಿಕೊಳ್ಳ ಬೇಕಾಯಿತು ಸಾಲಭಾರ ಅಧಿಕವಾಯಿತು. ಅದನ್ನು ಅರಿತ ಶಾಸ್ತ್ರೀಯವರು ವಾರದಲ್ಲಿ ಒಂದು ದಿನ ಊಟ ಬಿಟ್ಟರೆ ಎಷ್ಟು ಆಹಾರ ಸಂಗ್ರಹವಾಗುವುದೆಂದು ಲೆಕ್ಕಾಚಾರ ಹಾಕಿ ಪ್ರತಿ ಸೋಮವಾರ ರಾತ್ರಿ ಊಟ ಬಿಡಲು ಜನರಲ್ಲಿ ಮನವಿ ಮಾಡಿದರು ತಾವು ಸಹ ಸೋಮವಾರದ ಊಟ ತ್ಯಜಿಸಿದರು.

ಲಾಲ್‌ಬಹದ್ದೂರ್ ಶಾಸ್ತ್ರಿ ಪ್ರಧಾನಿಯಾಗಿದ್ದಾಗ ಅವರ ಮಕ್ಕಳು ಕುದುರೆಗಾಡಿಯಲ್ಲಿ ಶಾಲೆಗೆ ಹೋಗುತ್ತಿದ್ದರು. ಶಾಸ್ತ್ರಿಗಳ ಮಕ್ಕಳು ಕಾರಿನಲ್ಲೇ ಹೋಗುವ ಆಸೆ ವ್ಯಕ್ತಪಡಿಸಿದಾಗ 'ಮಕ್ಕಳೇ ಸರ್ಕಾರದ ಕಾರನ್ನು ಸರ್ಕಾರದ ಕೆಲಸಗಳಿಗೇ ಉಪಯೋಗಿಸಿಕೊಳ್ಳ ಬೇಕು. ಬೇರೆ ಕೆಲಸಗಳಿಗಲ್ಲ' ಎಂದರು.

ಒಮ್ಮೆ ಖಾಸಗಿ ಸಂಸ್ಥೆಯೊಂದು ಶಾಸ್ತ್ರಿಯವರಿಗೆ ಚಿನ್ನದಲ್ಲಿ ತುಲಾಭಾರ ಮಾಡಿ ಆ ಚಿನ್ನವನ್ನು ರಾಷ್ಟ್ರಕ್ಕೆ ನೀಡುವುದಾಗಿ ಮುಂದೆ ಬಂದಾಗ 'ನನ್ನ ತೂಕ ಬಹಳ ಕಡಿಮೆ, ತೂಕವಿರುವವರನ್ನು ಹುಡುಕಿ' ಎಂದು ಶಾಸ್ತ್ರೀಜಿಯವರು ಹೇಳಿ ಕಳುಹಿಸಿದರು.

ಭಾರತ ಸ್ವಾತಂತ್ರ್ಯಗೊಂಡ ಮೇಲೆ ನೆಹರು ಸರ್ಕಾರದಲ್ಲಿ ಶಾಸ್ತ್ರೀಯವರು ರೈಲ್ವೆ ಮಂತ್ರಿಯಾಗಿ ಅತ್ಯಂತ ನಿಷ್ಠೆಯಿಂದ ಕಾರ್ಯನಿರ್ವಹಿಸಿದರು. ಸೆಪ್ಟೆಂಬರ್ 1956ರಲ್ಲಿ ಮೆಹಬೂಬ ನಗರದಲ್ಲಿ ರೈಲು ಅಪಘಾತವಾಗಿ 112 ಜನರು ಮೃತರಾದಾಗ ಮತ್ತು ಮತ್ತೊಂದು ರೈಲು ದುರಂತ ಸಂಭವಿಸಿ 144 ಜನ ದುರ್ಮರಣವನ್ನಪ್ಪಿದ ಸಂದರ್ಭದಲ್ಲಿ ತುಂಬಾ ಮನನೊಂದು ರೈಲ್ವೆ ಸಚಿವ ಸ್ಥಾನಕ್ಕೆ ಮತ್ತೊಮ್ಮೆ ರಾಜೀನಾಮೆ ನೀಡಿದರು.

ನೆಹರು ಅವರ ಮರಣಾ ನಂತರ 1964 ರಲ್ಲಿ ಶಾಸ್ತ್ರಿಜಿಯವರು ದೇಶದ ಎರಡನೇ ಪ್ರಧಾನಿಯಾದರು. ಒಮ್ಮೆ ಅವರು ವಿದೇಶಕ್ಕೆ ಹೋಗಬೇಕಾಗಿ ಬಂತು. ಶಾಸ್ತ್ರಿಗಳು ಎಂದಿನಂತೆ ಮಾಸಲು ಅಂಗಿ, ಕಚ್ಚೆ ಪಂಚೆ ತೊಟ್ಟಿದ್ದರು. ಆಗ ಯಾರೋ ಒಬ್ಬರು 'ಸರ್ ವಿದೇಶ ಪ್ರವಾಸಕ್ಕೆ ಹೋಗುತ್ತಿದ್ದೀರಿ, ಈಗಲಾದರೂ ಚೆನ್ನಾಗಿರುವ ಸೂಟ್ ಹಾಕಿಕೊಳ್ಳಿ' ಎಂದಾಗ ಶಾಸ್ತ್ರೀಯವರು 'ನಾನು ಬಡವರ ದೇಶದ ಪ್ರತಿನಿಧಿ ಎಂದು ಜಗತ್ತಿಗೆ ಗೊತ್ತಾಗಲಿ ಬಿಡಿ', ಒಮ್ಮೆ ಅವರಿಗೆ ಯಾರೋ ಹೇಳಿದರಂತೆ : ಸರ್, ಅಲ್ಲಿ ಒಂದು ದೊಡ್ಡ ಹುದ್ದೆ ಖಾಲಿ ಇದೆ, ತಾವು ಒಂದು ಶಿಫಾರಸ್ಸು ಪತ್ರ ಕೊಟ್ಟರೆ, ಅದನ್ನು ತಮ್ಮ ಮಗನಿಗೆ ಕೊಡುವರು' ಎಂದರು. ಆದರೆ ಅವರು ಅದಕ್ಕೆ ಒಪ್ಪಲಿಲ್ಲ. ಅವನಿಗೆ ಯಾವುದರಲ್ಲಿ ಯೋಗ್ಯತೆ ಇದೆಯೋ ಅದಕ್ಕೆ ಸೇರಲಿ ಎಂದರಂತೆ. ಶಾಸ್ತ್ರೀಯವರು ಕಾಲವಾದ ಮೂರು ವರ್ಷ ಲಲಿತಾ ಶಾಸ್ತ್ರಿ ಅವರು ಹೊಲದಲ್ಲಿ ಗೋದಿಯ ತೆನೆಯನ್ನು ಕೊಯ್ಯುತ್ತಿರುವುದನ್ನು ಪತ್ರಿಕೆಗಳಲ್ಲಿ ಕಾಣಬ ಹುದಿತ್ತು. ಇವರು ನಮ್ಮ ಹೆಮ್ಮೆಯ ಪ್ರಧಾನಿಯವರ ಧರ್ಮಪತ್ನಿ. ಅದನ್ನು ಕಂಡು ಕಣ್ಣೀರು ಹರಿಯಿತು.


ಜನವರಿ 1966ರಲ್ಲಿ ತಾಷ್ಕೆಂಟ್‌ನಲ್ಲಿ ಪಾಕಿಸ್ತಾನದ ಜೊತೆ ದ್ವಿಪಕ್ಷೀಯ ಮಾತುಕತೆಗೆ ತೆರಳಿದ ಶಾಸ್ತ್ರೀಜಿ, 'ನೀವು ನಮ್ಮ ಮೇಲೆ ವಿನಾಕಾರಣ ದಾಳಿ ಮಾಡುವುದಿಲ್ಲವೆಂದು ಮಾತು ಕೊಟ್ಟು ಸಹಿ ಹಾಕುವವರೆಗೂ ಯಾವ ಮಾತುಕತೆಯು ಇಲ್ಲ' ಎಂದು ಪಟ್ಟು ಹಿಡಿದು ಕುಳಿತುಬಿಟ್ಟರು. ಕೊನೆಗೂ ಒಪ್ಪಿದ ಪಾಕಿಸ್ತಾನದ ಅಯೂಬ್ ಖಾನ್ ಒಪ್ಪಂದಕ್ಕೆ ಸಹಿ ಮಾಡಿದರು.

ಶಾಸ್ತ್ರಿಯವರು ಒಂದು ಲೋಟ ಹಾಲು ಕುಡಿದು ನಿಶ್ಚಿಂತೆಯಿಂದ ಮಲಗಿದರು. ಹೃದಯಾಘಾತದಿಂದ ಮೃತಪಟ್ಟ ರೆಂದು ಸುದ್ದಿ ಬಂತು ದೇಹವೆಲ್ಲಾ ನೀಲಿ ಬಣ್ಣಕ್ಕೆ ತಿರುಗಿತ್ತು. ನಮ್ಮ ಯಜಮಾನರು ತೀರ ಸರಳ ಜೀವನ ನಡೆಸಿದವರು, ಪ್ರತಿದಿನವೂ ವ್ಯಾಯಾಮ ಮಾಡುತ್ತಿದ್ದರು, ಅವರಿಗೆ ಹೃದಯದ ಕಾಯಿಲೆ ಇರಲೇ ಇಲ್ಲ, ಅವರನ್ನು ವಿಷ ಕೊಟ್ಟು ಕೊಲ್ಲಲಾಗಿದೆ. ಹಾಗಾಗಿ ದೇಹವೆಲ್ಲಾ ನೀಲಿ ಬಣ್ಣಕ್ಕೆ ತಿರುಗಿದೆ' ಎಂದು ಶಾಸ್ತ್ರಿಯವರ ಪತ್ನಿ ಲಲಿತ ಶಾಸ್ತ್ರಿ ಗೋಳಾಡಿದರೂ ಯಾರೂ ಕೇಳಲೇ ಇಲ್ಲ. 'ಈ ಮನುಷ್ಯ ಬಹಳ ದುಡ್ಡು ಮಾಡಿಕೊಂಡಿದ್ದಾನೆ, ನಾವು ಅಂದುಕೊಂಡಷ್ಟು ಸಾಚಾ ಅಲ್ಲ' ಎಂದು ಕೆಲ ರಾಜಕಾರಣಿಗಳು ಸಾವಿನ ಮನೆಯಲ್ಲೂ ಆರೋಪಿಸಿದರು.

ಶಾಸ್ತ್ರೀಜಿ ಅವರ ಬ್ಯಾಂಕಿನ ಪಾಸ್‌ಪುಸ್ತಕವನ್ನು ಅವರ ಪತ್ನಿ ತಂದು ತೋರಿಸಿದಾಗ ಪ್ರಧಾನಿಯಾಗಿ ಶಾಸ್ತ್ರೀಯವರು ಸಾಯುವ ಕಾಲಕ್ಕೆ ಅದರಲ್ಲಿ ಬರಿ 313 ರೂಪಾಯಿ ಇತ್ತು. ಇಂತಹ ಸರಳ, ಪ್ರಾಮಾಣಿಕ ಪ್ರಧಾನಿಯನ್ನು ನೆನಪು ಮಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ.

- ಹೆಚ್. ಮಲ್ಲಿಕಾರ್ಜುನ , ಹರಪನಹಳ್ಳಿ

# ಭಾರತ ರತ್ನ ಲಾಲ್ ಶಾಸ್ತ್ರೀಜಿ



ನಾವು ಜೀವನದಲ್ಲಿ ಎಷ್ಟೇ ಹಣ ಆಸ್ತಿ ಗಳಿಸಿದ್ದರು, ನಮ್ಮ ಹೊಟ್ಟೆಯ ಹಸಿವಿಗೆ ಅನ್ನ ಬೇಕು, ಅನ್ನವನ್ನು ಕೊಡುವ ರೈತ ನಮ್ಮೆಲ್ಲರ ಜೀವನಾಡಿ ಆಗಿದ್ದಾನೆ. ಹಾಗೇ ನಮ್ಮ ದೇಶದ ಗಡಿಯನ್ನು ಕಾಯುವ ಯೋಧ ನಾವು ನೆಮ್ಮದಿಯಿಂದ ಮಲಗಲು ಕಾರಣವಾಗಿದ್ದಾನೆ. ಈ ಇಬ್ಬರನ್ನು ನಾವು ಗೌರವಿಸುವುದು, ರಕ್ಷಿಸುವುದು ನಮ್ಮ ಕರ್ತವ್ಯ ಎಂದು " ಜೈ ಜವಾನ್, ಜೈ ಕಿಸಾನ್ " ಎಂಬ ವಾಕ್ಯವನ್ನು ಕೊಟ್ಟವರು ಭಾರತ ರತ್ನ ಲಾಲ್ ಬಹದ್ದೂರ್ ಶಾಸ್ತ್ರಿ ಅವರು.

ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಉತ್ತರ ಪ್ರದೇಶದ ವಾರಣಾಸಿ ಹತ್ತಿರದ ಮೊಗಲ್ ಸರಾಯ್ ಎಂಬ ಹಳ್ಳಿಯಲ್ಲಿ 02.10.1904 ರಂದು ಜನಿಸಿದರು. ತಂದೆ ಶಾರದಾ ಪ್ರಸಾದ್ ಶ್ರೀವಾತ್ಸವ, ತಾಯಿ ರಾಮದುಲಾರಿ.

ಇವರದ್ದು ಬಡತನದ ಕುಟುಂಬ, ಲಾಲ್ ಬಹದ್ದೂರ್ ಅವರು ಚಿಕ್ಕವರಾಗಿದ್ದಾಗಲೇ ತಂದೆ ತೀರಿಕೊಂಡಿದ್ದರಿಂದ ಜೀವನ ದುಸ್ಸಾಹಸವಾಗಿತ್ತು. ಹಾಗಾಗಿ ತಾಯಿ ರಾಮದುಲಾರಿ ತಮ್ಮ ಮಕ್ಕಳೊಂದಿಗೆ ತವರು ಮನೆ ಸೇರುತ್ತಾರೆ. ಲಾಲ್ ಬಹದ್ದೂರ್ ಅವರನ್ನು ಶಾಲೆಗೆ ಸೇರಿಸುತ್ತಾರೆ, ಬರಿಗಾಲಿನಲ್ಲೇ ಮೈಲಿಗಟ್ಟಲೆ ನಡೆದು ಶಾಲೆಗೆ ಹೋಗಿ ಬರುತ್ತಿದ್ದರು. ಪ್ರೌಢಶಾಲೆಗೆ ದಾಖಲಿಸಲು ವಾರಣಾಸಿಗೆ ಕಳಿಸುತ್ತಾರೆ. ಚೆನ್ನಾಗಿ ವಿದ್ಯಾಭ್ಯಾಸ ಮಾಡಿ, ವಾರಣಾಸಿ ವಿದ್ಯಾಪೀಠದಿಂದ ಶಾಸ್ತ್ರೀ ಎನ್ನುವ ಬಿರುದನ್ನು ಪಡೆಯುತ್ತಾರೆ. ಅಲ್ಲೇ ರಾಷ್ಟ್ರೀಯವಾದಿಗಳ ಒಡನಾಟ ಬೆಳೆಯುತ್ತದೆ, ಗಾಂಧೀಜಿಯವರ ವಿಚಾರ ಚಿಂತನೆಗಳಿಂದ ಪ್ರಭಾವಿತರಾಗುತ್ತಾರೆ, ಸ್ವಾತಂತ್ರ್ಯ ಹೋರಾಟದ ಮನೋ ಭಾವ ಇವರಲ್ಲಿ ಹೆಚ್ಚುತ್ತದೆ.ಗಾಂಧೀಜಿ ಯವರು ಅಸಹಕಾರ ಚಳುವಳಿಯಲ್ಲಿ ಭಾಗಿಯಾಗಲು ಜನತೆಗೆ ಕರೆ ಕೊಟ್ಟಿರುತ್ತಾರೆ, ಆದ್ದರಿಂದ ಹೋರಾಟಕ್ಕೆ ಧುಮುಕಲು ಇವರು ನಿರ್ಧರಿಸುತ್ತಾರೆ. ಆಗ ಶಾಸ್ತ್ರೀ ಅವರಿಗೆ ಇನ್ನು 16 ವರ್ಷ ಆಗಿತ್ತು. ಹಾಗಾಗಿ ತಾಯಿ ಬೇಡ ಎನ್ನುತ್ತಾರೆ. ಶಾಸ್ತ್ರೀಜಿಯವರು ಒಮ್ಮೆ ಏನಾದರೂ ಮಾಡಲು ನಿರ್ಧರಿಸಿದರೆ ; ಅದರಿಂದ ವಿಮುಖರಾಗದ ಗುಣವನ್ನು ಬೆಳೆಸಿಕೊಂಡವರು, ಹಾಗಾಗಿ ವಿದ್ಯಾಭ್ಯಾಸವನ್ನು ಬಿಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ, ಎಲ್ಲಾ ಹೋರಾಟಗಳಲ್ಲೂ ಸಕ್ರಿಯವಾಗಿದ್ದು, ಕೆಲವು ಹೋರಾಟದ ನಾಯಕತ್ವವನ್ನು ವಹಿಸಿದ್ದರು. ಜೈಲುವಾಸವನ್ನು ಅನುಭವಿಸಿದ್ದರು. ಗಾಂಧೀಜಿಯವರಿಗೆ ಆಪ್ತರಾಗಿದ್ದರು. ಭಾರತ ಸ್ವಾತಂತ್ರ್ಯ ಪಡೆದ ನಂತರ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರು ವಿದೇಶಾಂಗ ಸಚಿವರಾಗಿ, ಗೃಹ ಸಚಿವರಾಗಿ, ರೈಲ್ವೆ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಭಾರತದ ಎರಡನೇ ಪ್ರದಾನಮಂತ್ರಿ ಆಗಿದ್ದರು. ತಮ್ಮ ಪಾಲಿಗೆ ಬಂದ ಎಲ್ಲಾ ಕೆಲಸಗಳನ್ನು ಬಹಳ ಶ್ರದ್ದೆ ಯಿಂದ ಪ್ರಾಮಾಣಿಕವಾಗಿ ಮಾಡುತ್ತಿದ್ದರು. 11.01.1966 ರಂದು ನಿಧನರಾಗುತ್ತಾರೆ. ಇವರ ನೆನಪಿಗಾಗಿ ದೆಹಲಿಯಲ್ಲಿ ಸ್ಮಾರಕವೊಂದನ್ನು ನಿರ್ಮಿಸಿದ್ದಾರೆ.

- ಶಿವಪ್ರಸಾದ ಕರ್ಜಗಿ, ದಾವಣಗೆರೆ.

2400 Sq.ft FOR RENT TO OFFICE
2nd Floor, Old ZILLA KHAZANA, Backside Hadadi Road, 3rd Main, 14th Cross Corner Building, Davanagere-577002.
99029 99359

ಸೇಲ್ಸ್ ಬಾಯ್ಸ್/ಗರ್ಲ್ಸ್ ಅಸಿಸ್ಟೆಂಟ್ ಸೇಲ್ಸ್ ಬಾಯ್ಸ್/ಗರ್ಲ್ಸ್ ಹೆಲ್ಪರ್ಸ್ ಬೇಕಾಗಿದ್ದಾರೆ
ಶ್ರೀ ಮಾರುತಿ ಟೆಕ್ಸ್‌ಟೈಲ್ಸ್ & ಗಾರ್ಮೆಂಟ್ಸ್
[illegible] ದಾವಣಗೆರೆ - 04
86603 81629
98449 76176

ನೇತ್ರ ದಾನ ಶ್ರೇಷ್ಠ ದಾನ

ಓದುಗರ ಗಮನಕ್ಕೆ
[illegible]
- ಜಾಹೀರಾತು ವ್ಯವಸ್ಥಾಪಕರು

# 2027 ಜನವರಿಯೊಳಗೆ ರೈಲು ಸಂಚಾರಕ್ಕೆ ಕ್ರಮ : ಸಚಿವ ಸೋಮಣ್ಣ

(1ನೇ ಪುಟದಿಂದ) ರೈಲ್ವೆ ಸೌಕರ್ಯ ಹೊಂದಿದ ರಾಜ್ಯವನ್ನಾಗಿ ಮಾಡುವ ಗುರಿ ಹೊಂದಲಾಗಿದೆ. ಶಿವಮೊಗ್ಗ-ಶಿಕಾರಿಪುರ-ರಾಣೇಬೆನ್ನೂರು ಹೊಸ ರೈಲ್ವೆ ಯೋಜನೆಗೆ ಈಗಾಗಲೇ ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಎಕರೆ ಜಮೀನು ಸ್ವಾಧೀನ ಮಾಡಲಾಗಿದೆ ಎಂದರು.

**ರೈಲ್ವೆ ಮೇಲ್ಸೇತುವೆ, ಕೆಳಸೇತುವೆ ನಿರ್ಮಾಣ :** ಸಾರ್ವಜನಿಕರಿಗೆ ಅನಾನುಕೂಲ ವಾಗುತ್ತಿರುವ ಕಡೆ ರೈಲ್ವೆ ಇಲಾಖೆಯಿಂದಲೇ ಮೇಲ್ಸೇತುವೆ ಹಾಗೂ ಕೆಳಸೇತುವೆಗಳನ್ನು ನಿರ್ಮಾಣ ಮಾಡಲಾಗುತ್ತದೆ. ದಾವಣಗೆರೆ ನಗರದ ಅಶೋಕ ಟಾಕೀಸ್ ಹತ್ತಿರ ರೈಲ್ವೆ ಲೈನ್ ಕೆಳಸೇತುವೆಗೆ ಸಂಪರ್ಕ ರಸ್ತೆ ನಿರ್ಮಾಣದ ಭೂ ನೇರ ಖರೀದಿಗೆ 23.09 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದ್ದು, ಶೀಘ್ರವೇ ಈ ಕಾಮಗಾರಿ ಮಾಡಲು ಅನುವು ಮಾಡಿಕೊಡಲಾಗುತ್ತದೆ ಎಂದು ಹೇಳಿದರು.

**ರೈಲ್ವೆ ವೇಗ ಹೆಚ್ಚಿಸಲು ಕ್ರಮ :** ರೈಲ್ವೆ ಇಂಜಿನ್‌ಗಳು ಬಹುತೇಕ ಶೇ. 98 ರಷ್ಟು ವಿದ್ಯುತ್ ಚಾಲಿತವಾಗಿದ್ದು, ಶೇ.2 ರಷ್ಟು ಮಾತ್ರ ಡೀಸೆಲ್ ಇಂಜಿನ್‌ಗಳಿವೆ. ರೈಲ್ವೆ ಪ್ರಯಾಣದ ವೇಗ ಪ್ರಸ್ತುತ 110 ಕಿ.ಮೀ ಇದ್ದು, ಇದನ್ನು 135 ಕಿ.ಮೀ ವರೆಗೆ ವೇಗ ಹೆಚ್ಚಿಸುವ ಗುರಿಯೊಂದಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ವಂದೇ ಭಾರತ್ ರೈಲು ಬಡವರು, ಮಧ್ಯಮ ವರ್ಗದವರಿಗೆ ತುರ್ತು ಪ್ರಯಾಣಕ್ಕಾಗಿ ಕೈಗೆಟಕುವ ದರದಲ್ಲಿ ಟಿಕೆಟ್ ಇದ್ದು, ಇದರಲ್ಲಿ ನೀಡಲಾಗಿರುವ ಸೌಲಭ್ಯಗಳ ಬಗ್ಗೆ ಅರಿಯಲು ಪ್ರಯಾಣಿಸಬೇಕೆಂದರು.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಸಭೆಯಲ್ಲಿ ಮಾತನಾಡಿ, ದಾವಣಗೆರೆ ನಗರದಲ್ಲಿನ ಮೀನು ಮಾರುಕಟ್ಟೆ ಬಳಿ ರೈಲ್ವೆ ಮೇಲ್ಸೇತುವೆ ಅಥವಾ ಕೆಳಸೇತುವೆ ಅಗತ್ಯವಾಗಿದೆ ಎಂದು ಹೇಳಿದರು. ಅಶೋಕ ಟಾಕೀಸ್ ಹತ್ತಿರ ರಸ್ತೆ ಕಿರಿದಾಗಿದ್ದು, ಸಂಪರ್ಕ ರಸ್ತೆ ನಿರ್ಮಾಣ ಮಾಡಬೇಕು, ಲಿಂಗೇಶ್ವರ ದೇವಸ್ಥಾನದ ಹತ್ತಿರ ಪಾದಚಾರಿ ಮಾರ್ಗ ನಿರ್ಮಿಸಲು, ಶಿವಮೊಗ್ಗ - ಶಿಕಾರಿಪುರ - ರಾಣೇಬೆನ್ನೂರು ಹೊಸ ಮಾರ್ಗದಲ್ಲಿ ಸೂರಗೊಂಡನಕೊಪ್ಪ ಅಥವಾ ನ್ಯಾಮತಿಯಲ್ಲಿ ರೈಲ್ವೆ ನಿಲ್ದಾಣಕ್ಕೆ ಅವಕಾಶ ಮಾಡಲು, ಹರಿಹರದಲ್ಲಿನ ರೈಲ್ವೆ ಆಸ್ಪತ್ರೆ, ಸ್ಕೂಲ್ ಮೇಲ್ದರ್ಜೆಗೇರಿಸಲು ಸಚಿವರಲ್ಲಿ ಮನವಿ ಮಾಡಿದರು.

ಶಾಸಕ ಬಿ.ಪಿ.ಹರೀಶ್, ಹೊಸಪೇಟೆಗೆ ಹೋಗುವ ಹೆದ್ದಾರಿಯಲ್ಲಿ ಒಂದೇ ರೈಲ್ವೆ ಸೇತುವೆ ಇದ್ದು, ಮಳೆ ಬಂದಾಗ ಈ ಮಾರ್ಗದ ವಾಹನಗಳಿಗೆ ತೊಂದರೆಯಾಗುವುದರಿಂದ ರೈಲ್ವೆ ಸೇತುವೆಯ ಅವಶ್ಯಕತೆ ಇದೆ ಎಂದರು.

ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್, ಮಹಾನಗರ ಪಾಲಿಕೆ ಮೇಯರ್ ಚಮನ್ ಸಾಬ್, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ರೈಲ್ವೆ ಹಿರಿಯ ಅಧಿಕಾರಿ ಶರ್ಮಾ ಸೇರಿದಂತೆ ರೈಲ್ವೆ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಪಾಕ್ ಪ್ರಜೆ !

(1ನೇ ಪುಟದಿಂದ) ಕನ್ನಡ ಭಾಷೆ ಬರುತ್ತಿರಲಿಲ್ಲ. ಹಿಂದಿ, ಉರ್ದು ಭಾಷೆಯಲ್ಲಿ ಮಾತನಾಡುತ್ತಿದ್ದರು ಎಂದು ತಿಳಿದು ಬಂದಿದೆ.

ಫಾತಿಮಾ ಹೆಸರಿನವಳಾದ ಈಕೆ ಹಿಂದೂ ಹೆಸರಿನಲ್ಲಿ ಆಧಾರ್ ಕಾರ್ಡ್, ಪಾಸ್ ಪೋರ್ಟ್ ಹೊಂದಿದ್ದಳು. ನಿಶಾ ಶರ್ಮಾ ಎಂದು ಹೆಸರು ಬದಲಿಸಿದ್ದ ಈಕೆ ಆಧಾರ್ ಕಾರ್ಡ್, ಪಾಸ್ ಪೋರ್ಟ್ ನಲ್ಲಿಯೂ ಇದೇ ಹೆಸರಿತ್ತು. ತಂದೆ ಹೆಸರು ರಾಮ ಬಾಬು ಶರ್ಮಾ ಎಂದು ಆಧಾರ್ ಕಾರ್ಡ್ ಮಾಡಿಸಿದ್ದ ಈಕೆಯು ಚೆನ್ನೈ ವಿಮಾನ ನಿಲ್ದಾಣದ ಬಳಿ ಸೆರೆ ಸಿಕ್ಕ ಬಳಿಕ ಮಾಹಿತಿ ಹೊರ ಬಿದ್ದಿದೆ ಎನ್ನಲಾಗಿದೆ. ಏತನ್ಮಧ್ಯೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾವಣಗೆರೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿಲ್ಲ, ಯಾರನ್ನೂ ಬಂಧಿಸಿಲ್ಲ ಎಂದು ಜಿಲ್ಲಾ ಪೊಲೀಸ್ ಇಲಾಖೆ ತಿಳಿಸಿದೆ.

ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಟಕ್ಕಿವೆ
50x80 North, 40x60 North, 120 ಅಡಿ ರೋಡಿಗಿದೆ. 50x80 East, 40x60 East, 40x60, 40x60 South ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಸೈಟುಗಳು ಮಾರಾಟಕ್ಕಿವೆ
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ, 40 ಅಡಿ ರೋಡ್ ಎದುರುಗಡೆ ಪಾರ್ಕ್ ಇದೆ. 30x43 North, 30x50 North, 30x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಸೈಟುಗಳು ಮಾರಾಟಕ್ಕಿವೆ
ಶಿವ-ಪಾರ್ವತಿ ಬಡಾವಣೆಯಲ್ಲಿ 40x70 ಪೂರ್ವ, ಜೈನ್ ಸ್ಕೂಲ್ ಹಿಂಭಾಗದಲ್ಲಿ 30x55 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ, 35x50 ಉತ್ತರ-ಪಶ್ಚಿಮ ಕಾರ್ನರ್, 40x70 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2ಕೆಜಿ ಚೀಲಗಳು ರೂ. 25/- ಸ್ಥಳ : ದೊಡ್ಡಬಾತಿ
88920 08800

ಬೇಕಾಗಿದ್ದಾರೆ
ಹೋಟೆಲ್‌ನ ಜ್ಯೂಸ್ ಕೌಂಟರ್‌ನಲ್ಲಿ ಕೆಲಸ ಮಾಡಲು ಹುಡುಗ - ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ.
90367-34919

ಹೋಟೆಲ್ ಬಾಡಿಗೆಗೆ ಇದೆ
ಟೀ ಫ್ರಾಂಚೈಸಿ, ದೋಸೆ ಹೋಟೆಲ್ ಆಲ್ ರೌಂಡ್ ಹೋಟೆಲ್ ಮಾಡಲು 20x40 ಅಳತೆಯ ಹೋಟೆಲ್ ಬಾಡಿಗೆಗೆ ಇದೆ.
ಎಸ್.ಎಸ್. ಆಸ್ಪತ್ರೆ ರಸ್ತೆ, ದಾವಣಗೆರೆ.
9740514510, 9731262215

ಮನೆ ಬಾಡಿಗೆಗೆ ಇದೆ
House to -Let
ಪೂರ್ವ ದಿಕ್ಕು, 2 BHK, Ist Floor
99005 21848
ಕರೆ ಮಾಡುವ ಸಮಯ : ಬೆ. 10 ರಿಂದ ಮ. 2ರವರೆಗೆ
#159, 1ನೇ ಮುಖ್ಯರಸ್ತೆ, 5ನೇ ಕ್ರಾಸ್, ಬಿ ಬ್ಲಾಕ್, ದೇವರಾಜ ಅರಸು ಲೇ ಔಟ್, ದಾವಣಗೆರೆ.

ಬೇಕಾಗಿದ್ದಾರೆ
ಕಂಪ್ಯೂಟರ್‌ನಲ್ಲಿ ಇಂಗ್ಲಿಷ್ ಹಾಗೂ ಕನ್ನಡ ಟೈಪ್ ಮಾಡಲು ಪುರುಷ/ಮಹಿಳೆ ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಗ್ಗೆ 8 ರಿಂದ 10 ಗಂಟೆವರೆಗೆ (2 ಗಂಟೆ ಮಾತ್ರ)
ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್ (ರಿ.), ಚನ್ನಗಿರಿ ರಂಗಪ್ಪ ಗಡಿಯಾರ ಕಂಬದ ಎದುರು, ರೈಲ್ವೆ ಸ್ಟೇಷನ್ ರಸ್ತೆ, ದಾವಣಗೆರೆ - 1.
94481 10895

WANTED
* Marketing Executive
* Graphic Designer
* Video editor
* Sale manager
Send your Resume to Whatsapp No.
99019 11421

ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ ಫೈನಾನ್ಸ್,
GST & Income tax ,
ನೋಂದಣಿ, ನವೀಕರಣ
ಆಡಿಟ್ ಮಾಡಿಕೊಡುತ್ತೇವೆ.
94838 62779

ಹೋಟೆಲ್ ಬಾಡಿಗೆಗೆ ಇದೆ
ದಾವಣಗೆರೆ-ಚಿತ್ರದುರ್ಗ NH-48 ಹೆಬ್ಬಾಳು ಗ್ರಾಮದಲ್ಲಿ ಸರ್ವೀಸ್ ರಸ್ತೆಗೆ ಮತ್ತು BPCL ಪೆಟ್ರೋಲ್ ಬಂಕ್ ಪಕ್ಕದಲ್ಲಿ ಇರುವ ಡಾಬಾ ಹೋಟೆಲ್ ನಡೆಸಲು ಎಲ್ಲ ಅನುಕೂಲ ಇರುವ ಹೋಟೆಲ್ ಬಾಡಿಗೆಗೆ ಇದೆ.
ಸಂಪರ್ಕಿಸಿ : ಪಾಲಾಕ್ಷಪ್ಪ / ಮಧು
98447 11299, 96639 95281

ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ
ಡಿಗ್ರಿ ಪಾಸಾದ 18/35 ವರ್ಷದೊಳಗಿನ ಹುಡುಗರು/ಹುಡುಗಿಯರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಕಂಪ್ಯೂಟರ್‌ನಲ್ಲಿ MS Office ಆದವರಿಗೆ ಮೊದಲ ಆದ್ಯತೆ. ಆಕರ್ಷಕ ವೇತನ ನೀಡಲಾಗುವುದು.
ಈ ಕೆಳಗಿನ ಫೋನ್‌ಗೆ ಸಂಪರ್ಕಿಸಿ:
89708 16788

WANTED
Girls Required for Billing work at Food Mart Supermarket, Davangere.
Quali : Any Degree
98864 63531

ಶ್ರೀ ಸಾಯಿ ಫೈನಾನ್ಸ್ (ರಿ)
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು. ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್ ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿ. ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಸಂಪರ್ಕಿಸಿ.
96860 22969

ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

SSLC/PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಗಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪ.ಪೂ. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಬಿಎಸ್‌ಇ) ಅನುಮೋದಿತಕೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE, DCM TownShip, Davangere.
97317 40827, 83107 47112, 97432 20274

ನೇರ ಸಂದರ್ಶನ
ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್‌ಗೆ ಕ್ಯಾಷಿಯರ್ ಮಹಿಳೆಯರು ಎರಡು - ಮೂರು ವರ್ಷ ಅನುಭವ, ಸರ್ವೀಸ್ ಹಾಗೂ ಕ್ಲೀನ್ ಮಾಡಲು ಹುಡುಗರು ಮತ್ತು ಮಹಿಳೆಯರು ಪಾರ್ಟ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಜೆ 6 ರಿಂದ ರಾತ್ರಿ 11ರ ವರೆಗೆ. ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
94489 80070, 88847 04025

TUITIONS
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

TUITIONS
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

ಬೇಕಾಗಿದ್ದಾರೆ
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
80502 19547



'ವಂದೇ ವಾಂಛಿತಲಾಭಾಯ ಚಂದ್ರಾರ್ಧಕೃತಶೇಖರಂ। ವೃಷಾರೂಢಾ ಶೂಲಧರಂ ಶೈಲಪುತ್ರಿಂ ಯಶಸ್ವಿನೀಂ ॥'

ಇಂದಿನಿಂದ ನವರಾತ್ರಿ ಉತ್ಸವ....

# ಶೈಲಪುತ್ರಿ - ಒಂದು ಚಿಂತನೆ

**1ನೇ ದಿನದ ವಿಶೇಷ ಅಲಂಕಾರ**

ಇದು ಶೈಲಪತ್ರಿ ದೇವಿಗೆ ಮಾಡುವಂತಹ ಪ್ರಾರ್ಥನೆ. ಈ ರೂಪವು ನವ ದುರ್ಗೆಯರ ಮೊದಲನೇ ರೂಪವಾಗಿದೆ. ಪ್ರಾರ್ಥನೆಯಲ್ಲಿ ಭಕ್ತರಿಗೆ ವಾಂಛಿತ ಫಲಗಳು ಎಂದರೆ ಅವರ ಅಭೀಷ್ಟಗಳನ್ನು ನೆರವೇರಿಸುವ ತಾಯಿಯೇ ನಿನಗೆ ನಮಿಸುತ್ತೇನೆ. ನಿನ್ನ ತಲೆಯ ಮೇಲೆ ಚಂದ್ರನು ಕಿರೀಟದಂತೆ ಶೋಭಿಸುತ್ತಿದ್ದಾನೆ. ಕೈಯಲ್ಲಿ ತ್ರಿಶೂಲ ಹಿಡಿದಿರುವ ನಂದಿಯ ಮೇಲೆ ಬರುವ ನೀನು ಶೈಲ ಎಂದರೆ ಪರ್ವತರಾಜನ ಪುತ್ರಿಯು ಮತ್ತು ನೀನು ಯಶಸ್ಸನ್ನು ಕೊಡುವ ಯಶಸ್ವಿನಿಯು ಎಂದಾಗಿದೆ.

ದಕ್ಷ ಯಜ್ಞದಲ್ಲಿ ಪತಿ ನಿಂದೆಯನ್ನು ಸಹಿಸಲಾಗದೇ ತನ್ನ ಚಿದಗ್ನಿಯಿಂದ ತನ್ನನ್ನೇ ತಾನು ಭಸ್ಮಮಾಡಿಕೊಂಡ ಪತಿವ್ರತೆ ಶಿವಪತ್ನಿ ಸತಿ ದೇವಿ ಅಥವಾ ದಾಕ್ಷಾಯಿಣಿ, ತಾನು ಪರ್ವತ ರಾಜ ಎಂದರೆ ಹಿಮವಂತನ ಮಗಳಾಗಿ ಜನಿಸಿದಳು.ಇವಳು ಶಿವನನ್ನೇ ವರಿಸಬೇಕು ಎಂದು ಶಿವ ಭಕ್ತಿಯಿಂದ ತುಂಬಿದ್ದ ಮಾತೆಯು.

ನವರಾತ್ರಿಯ ಪರ್ವಕಾಲವು ಸಾಧಕರಿಗೆ ಅತ್ಯಂತ ಶ್ರೇಷ್ಠವಾದ ಕಾಲ. ದೇವಿಯ ಆರಾಧನೆ ಮಾಡಿ ಅಧ್ಯಾತ್ಮಿಕ ಸಾಧನೆಯನ್ನು ಮಾಡಿಕೊಳ್ಳುವವರು, ಮೂಲಾ ಧಾರದಲ್ಲಿ ಸ್ಥಿರವಾಗಿರುವಂತಹ ಈ ಶೈಲಪುತ್ರಿಯನ್ನು, ಮೂಲಾಧಾರ ಚಕ್ರದಲ್ಲಿ ಧ್ಯಾನ ಮಾಡಿ ಸಿದ್ಧಿಸಿಕೊಳ್ಳುತ್ತಾರೆ. ಯೋಗಿಗಳು ಕೂಡ ಯೋಗ ಸಾಧನೆಗೆ ಈ ತಾಯಿಯನ್ನು ಧ್ಯಾನ ಮಾಡುತ್ತಾರೆ. ನಮ್ಮದೇಹದಲ್ಲಿರುವ ಏಳು ಚಕ್ರಗಳಲ್ಲಿ ಮೊದಲನೆಯದಾದ ಮೂಲಾಧಾರ ಚಕ್ರದಲ್ಲಿ ಶೈಲ ಪುತ್ರಿಯನ್ನು ಧ್ಯಾನಿಸಬೇಕು.

ಈ ತಾಯಿಯು ಕಡುಗೆಂಪು ಬಣ್ಣದವಳಾಗಿದ್ದು, ಬಿಳಿಯ ಬಣ್ಣದ ವಸ್ತ್ರಗಳನ್ನು ಧರಿಸಿದ್ದು, ನಂದಿಯ ಮೇಲೆ ಆಸೀನಳಾಗಿ, ತನ್ನ ಬಲಗೈಯ್ಯಲ್ಲಿ ತ್ರಿಶೂಲ ಮತ್ತು ಎಡಗೈಯ್ಯಲ್ಲಿ ಕಮಲಗಳನ್ನು ಹಿಡಿದಿದ್ದಾಳೆ. ಈ ರೂಪವನ್ನು ಮನದಲ್ಲಿ ನಾವು ನಿಲ್ಲಿಸಿಕೊಂಡು ಶೈಲ ಪುತ್ರಿಯನ್ನು ಆರಾಧಿಸಬೇಕು.

ಶೈಲ ಪುತ್ರಿಯು ವಾತಾವರಣ ಸೇರಿದಂತೆ ಎಲ್ಲ ಬೆಟ್ಟಗಳು, ನದಿಗಳು ಮತ್ತು ಸಮುದ್ರ ಗಳನ್ನು ಆವರಿಸಿದ್ದಾಳೆ. ಆದ್ದರಿಂದ ಇವಳು ಪ್ರಕೃತಿ ಮಾತೆ. ಪ್ರಕೃತಿಯ ಕಣಕಣಗಳಲ್ಲೂ ಇವಳು ತುಂಬಿರುವುದರಿಂದ, ನಾವು ಪ್ರಕೃತಿ ಯನ್ನು ಸಂರಕ್ಷಿಸುವುದರಿಂದ ತಾಯಿಯ ಕಾರು ಣ್ಯಕ್ಕೆ ಪಾತ್ರರಾಗಬಹುದು. ಪ್ರಕೃತಿಯನ್ನು ಧ್ವಂಸ ಮಾಡಿದಾಗ, ತಾಯಿಯ ಕೋಪಕ್ಕೆ ಗುರಿಯಾಗು ತ್ತೇವೆ. ಪ್ರಕೃತಿ ವಿಕೋಪಗಳನ್ನು ಎದುರಿಸುವ ಶಕ್ತಿ ನಮಗಿಲ್ಲ ಎಂಬುದನ್ನು, ಸುನಾಮಿಗಳು, ಅತೀ ಮಳೆಯಿಂ ದಾಗುವ ಜಲಪ್ರಳಯಗಳು, ಭೂಕಂಪನಗಳು ನಮಗೆ ತಿಳಿಸುತ್ತಲೇ ಇವೆ.

ಈ ದೇವಿಯು ಮಾನವನ ಮೂಲಾಧಾರ ಚಕ್ರದಲ್ಲಿ ನೆಲೆಸಿರುವುದರಿಂದ, ಪ್ರತಿಯೊಬ್ಬ ಮಾನವನಲ್ಲೂ ದೇವಿಯ ಶಕ್ತಿ ಅಡಗಿದೆ, ಅದನ್ನು ತಿಳಿದುಕೊಂಡು ಭಗವತಿಯನ್ನು ಆರಾಧಿಸಬೇಕು. ಇದರಿಂದಲೇ ಅರಿಶಿಣ, ಕುಂಕುಮ ಕೊಟ್ಟು ಮುತ್ತೈದೆಯರಿಗೆ ನಮಸ್ಕರಿಸುವ ಸಂಪ್ರದಾಯವಿದೆ.

ಪ್ರತಿಮೆಯಲ್ಲಿ ಅಥವಾ ಕಲಶದಲ್ಲಿ ಭಗವತಿಯನ್ನು ಆವಾಹನೆ ಮಾಡಿ, ಪೂಜೆ ಮಾಡುವುದು ಒಂದಾದರೆ, ಪ್ರಕೃತಿಯಲ್ಲಿ ಅವಳ ಇರುವನ್ನು ಅರಿತು ಆರಾಧಿಸುವುದು ಇನ್ನೂ ಹೆಚ್ಚಿನ ಸಾಧನೆ. ಅಂತರಂಗದಲ್ಲಿ ಅವಳನ್ನು ಕಂಡು ಧ್ಯಾನದಲ್ಲಿ ಸಿದ್ಧಿಯನ್ನು ಪಡೆಯುವುದು ಮತ್ತೊಂದು ಹಂತದ ಸಾಧನೆ.

ಈ ಎಲ್ಲಾ ಸಾಧನೆಗಳಿಗೂ ನವರಾತ್ರಿಯ ಪರ್ವಕಾಲವು ಅತ್ಯಂತ ಶ್ರೇಷ್ಠ. ಭಕ್ತರನ್ನು ಅನುಗ್ರಹಿಸಲೆಂದೇ ತಾಯಿಯು ಭುವಿಗೆ ಬಂದಿರುವಂತಹ ಕಾಲ. ಇದನ್ನರಿತು ನಾವೆಲ್ಲರೂ ತಾಯಿಯ ಕೃಪೆಗೆ ಪಾತ್ರರಾಗೋಣ.

**- ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.



**ಸಾಯಿಬಾಬಾ ಪುಣ್ಯಾರಾಧನೆ**

ದಾವಣಗೆರೆ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಸಾಯಿಬಾಬಾ ಮಂದಿರದಲ್ಲಿ ಶ್ರೀ ಸಾಯಿಬಾಬಾ ಅವರ 106ನೇ ಪುಣ್ಯಾರಾಧನೆ ಮಹೋತ್ಸವವು ಬುಧವಾರದಿಂದ ಆರಂಭವಾಯಿತು. ಈ ಮಹೋತ್ಸವವು 12 ದಿನಗಳ ಕಾಲ ನಡೆಯಲಿದೆ.

## ನಗರದ ಬನ್ನಿಮಹಾಂಕಾಳಿ ದೇವಸ್ಥಾನದಲ್ಲಿ ಹೊರನಾಡು ಅನ್ನಪೂರ್ಣೇಶ್ವರಿ ಅಲಂಕಾರ

ಆಂಜನೇಯ ಬಡಾವಣೆ ಬಿಐಇಟಿ ಕಾಂಪೌಂಡ್ 19 ನೇ ಕ್ರಾಸ್‌ನಲ್ಲಿರುವ ಶ್ರೀ ಬನ್ನಿಮಹಾಂಕಾಳಿ ದೇವಸ್ಥಾನ ಅಭಿವೃದ್ಧಿ ಸಮಿತಿ ವತಿಯಿಂದ ಶ್ರೀ ಬನ್ನಿ ಮಹಾಂಕಾಳಿ ದೇವಿಯ 11 ನೇ ವರ್ಷದ ಶರನ್ನವರಾತ್ರಿಯ ಪೂಜಾ ಮಹೋತ್ಸವ ಇಂದಿನಿಂದ ಇದೇ ದಿನಾಂಕ 12 ರವರೆಗೆ ಜರುಗಲಿದೆ. ಇಂದು ಬೆಳಿಗ್ಗೆ ನಿತ್ಯ ಪೂಜೆ ಶ್ರೀ ಹೊರನಾಡು ಅನ್ನಪೂರ್ಣೇಶ್ವರಿ ದೇವಿ ಅಲಂಕಾರ, ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ ನೆರವೇರಲಿದೆ.

## ನಗರದ ದಾವಲ್‌ಪೇಟೆ ಶ್ರೀ ಚೌಡೇಶ್ವರಿ ದೇವಿಗೆ ವಿಶೇಷ ಅಲಂಕಾರ

ದಾವಣಗೆರೆಯ ದಾವಲ್‌ಪೇಟೆ ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನದಲ್ಲಿ ಶ್ರೀ ಚೌಡೇಶ್ವರಿ ದೇವಿಗೆ ದಸರಾ ಮಹೋತ್ಸವದ ವಿಶೇಷ ಅಲಂಕಾರಗಳು ಇಂದಿನಿಂದ ಇದೇ ದಿನಾಂಕ 12ರವರೆಗೆ ನಡೆಯಲಿವೆ. ಇಂದು ಬೆಳಿಗ್ಗೆ 10.30ಕ್ಕೆ ದೀಪಾರಾಧನೆ ಘಟಸ್ಥಾಪನೆ, ಅರಿಶಿಣ ಕುಂಕುಮ ಅಲಂಕಾರ ನಡೆಯಲಿದೆ. ನಾಳೆ ಶುಕ್ರವಾರ ಎಲೆ ಅಡಿಕೆ ಅಲಂಕಾರ ನಡೆಯಲಿವೆ.

## ಮಹಾನ್ ಚೇತನ ಶಾಸ್ತ್ರೀಜಿ

ಜೈ ಜವಾನ್ ಜೈ ಕಿಸಾನ್
ದೇಶಕ್ಕೆ ಜೀವನ ತ್ಯಾಗ ಮಾಡಿದ ಮಹಾನ್
ನಾಡಿ ನ ಹೆಮ್ಮೆಯ ನಾಯಕ
ಲಾಲ್ ಬಹಾದುರ್ ಶಾಸ್ತ್ರಿಎಂಬ ಸುಪುತ್ರ

ಮೂರ್ತಿ ಚಿಕ್ಕದು ಚಿಂತನೆ ಮಹಾನ್
ದೇಶಕ್ಕೆ ಮಾಡಿದರು ಬಲಿದಾನ
ಬಡ ತನ ದಲ್ಲಿ ಬೆಳೆದ ಮೇರು ವ್ಯಕ್ತಿ
ಆದರು ಭಾರತದ ಧೀರ ಪ್ರಧಾನ ಮಂತ್ರಿ

ಶಾರದಾ ಪ್ರಸಾದರ ಪುತ್ರರು
ಶಾಂತಿ ದೂತರಾಗಿ ಹೆಸರಾದರು
ದೇಶ ಕಂಡ ಮಹಾನ್ ನೇತಾರ
ಸ್ವಾತಂತ್ರ್ಯ ಹೋರಾಟದ ಧೀರ

ಮಂತ್ರಿ ಸ್ಥಾನವನ್ನೇ ಬಿಟ್ಟರು
ಹೆಚ್ಚಾದ ಹಣ ಸರ್ಕಾರಕ್ಕೆ ಹಿಂದಿರುಗಿಸಿದರು
ಭ್ರಷ್ಟಾಚಾರದ ವಿರುದ್ಧ ಹೋರಾಡಿದರು
ದೇಶಕ್ಕಾಗಿ ನೀಡಿದರು ಉಸಿರು

ಪರಮಾಣು ಪರೀಕ್ಷೆಗೆ ಸಹಕಾರ
ಕ್ಷೀರ ಕ್ರಾಂತಿ ಮಾಡಿದ ನೇತಾರ
ನ್ಯಾಯ ನೀತಿಯ ಸಾಕಾರ
ವಿಶ್ವ ಮನ್ನಣೆ ಪಡೆದ ವೀರ

ಇಂದು ಇವರ ಜನುಮದಿನ
ಇವರ ಎಂದೂ ಮರೆಯದಿರೋಣ
ಸ್ವಾತಂತ್ರ್ಯ ತಂದ ಭೀಮ ಶಕ್ತಿಯ ಚೇತನ
ಚೀನಾ ಪಾಕಿಸ್ತಾನ ಹಿಮ್ಮೆಟ್ಟಿಸಿದ ವಾಮನ

## ಬಾಪು

ಅಹಿಂಸೆಯೇ ಮಂತ್ರವಾಗಿದ್ದ ಮಹಾತ್ಮ
ಹಿಂಸೆ ಯನ್ನೇ ಅರಿಯದ ಆತ್ಮ
ಸ್ವಾತಂತ್ರ್ಯ ತಂದ ಮೇರು ವ್ಯಕ್ತಿ
ನಮ್ಮೆಲ್ಲರ ಆರಾಧ್ಯ ಮೂರ್ತಿ

ಪೋರ ಬಂದರಿನಲ್ಲಿ ಜನನ
ತುಂಡು ಪಂಚೆ ಉಟ್ಟ ವಾಮನ
ಸದಾ ಖಾದಿ ಸಾತ್ವಿಕ ಆಹಾರ
ಭಾರತ ಭಾರತ ಎನ್ನುತ್ತಾ ಬಿಟ್ಟರು ಉಸಿರ

ಬಾಪು ಬಾಪು ಎಂದರೆ ಮನಕೆ ತಂಪು
ಬಾಪು ನೀ ದೇಶದ ಕಂಪು
ಬಾಪು ನೀ ಬೆಳಗಿದೆ ಸ್ವಾತಂತ್ರ್ಯದ ಹಣತೆ
ನೀ ಉಳಿಸಿದೆ ದೇಶ ಪ್ರಜೆಗಳ

ಅನವರತ ಪಾಲಿಸಿದೇ ತಪಸ್ಸು
ತಂದೆ ನೀ ಸ್ವಾತಂತ್ರ್ಯವೆಂಬ ತೇಜಸ್ಸು
ನಿನ್ನ ಹಿರಿಮೆ ಸದಾ ಮಾನ್ಯ
ನಿನ್ನ ಪಡೆದ ನಾವೇ ಧನ್ಯ

**- ಕೋಮಲ ವಿ. ಕುಮಾರ್**, ದಾವಣಗೆರೆ.

# ಜಿಲ್ಲಾ ಕಾಂಗ್ರೆಸ್‌ನಿಂದ ಗಾಂಧಿ ನಡಿಗೆ



ದಾವಣಗೆರೆ, ಅ. 2 - ಭಾರತ ಬ್ರಿಟಿಷರ ಆಳ್ವಿಕೆಯಿಂದ ಸ್ವತಂತ್ರ ಪಡೆದುಕೊಂಡ ದಿನದಿಂದಲೂ ಸಹ ನಿರಂತರವಾಗಿ ಪ್ರತಿ ವರ್ಷ ನೆನೆದುಕೊಳ್ಳುವ ವ್ಯಕ್ತಿ ಎಂದರೆ ಅದುವೇ ರಾಷ್ಟ್ರಪಿತ ಮಹಾತ್ಮ ಗಾಂಧಿಜಿ ಎಂದು ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಓಬೇದುಲ್ಲಾ ಷರೀಫ್ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ಗಾಂಧಿ ನಡಿಗೆ ಮತ್ತು ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಯವರ ಜಯಂತಿ ಆಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ಪ್ರಜೆಗಳು ಅದರಲ್ಲೂ ವಿದ್ಯಾರ್ಥಿಗಳು ಗಾಂಧಿ ತಾತ ಎಂದೇ ಪ್ರತಿವರ್ಷ ಅವರ ಜಯಂತ್ಯೋತ್ಸವ ದಿನವನ್ನು ಸ್ಮರಿಸುತ್ತಾರೆ. ಅವರ ವೇಷ ಭೂಷಣವನ್ನು ಹಾಕಿಕೊಳ್ಳುವುದು, ಅವರ ಕೊಡುಗೆಗಳನ್ನು ನೆನೆಯುವುದು, ನಮ್ಮೆಲ್ಲರ ಕರ್ತವ್ಯ ಎಂದರು.

ಕಾಂಗ್ರೆಸ್ ಪಕ್ಷಕ್ಕೆ ಮಹಾತ್ಮ ಗಾಂಧೀಜಿಯವರ ಕೊಡುಗೆ ಬಹಳಷ್ಟಿದೆ. ಅದೇ ರೀತಿ ದೇಶವನ್ನು ಬ್ರಿಟಿಷರ ಚುಕ್ಕಾಣಿಯಿಂದ ಬಿಡಿಸಲು ಮಹಾತ್ಮ ಅವರ ಶ್ರಮ ಅಪಾರ. ಅವರ ಜೀವನ ಆದರ್ಶವಾಗಿದ್ದು, ಅದನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಕಾಂಗ್ರೆಸ್ ಸರ್ಕಾರ ಇಂದು ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು.

ಅದೇ ರೀತಿ ಲಾಲ್ ಬಹದ್ದೂರ್ ಶಾಸ್ತ್ರೀಯವರೂ ಸಹ ಗಾಂಧೀಜಿಯವರ ಅನುಯಾಯಿಯಾಗಿ ಅವರ ಸಿದ್ಧಾಂತದಲ್ಲೇ ರಾಜಕೀಯ ಮತ್ತು ವೈಯಕ್ತಿಕ ಜೀವನವನ್ನು ನಡೆಸಿದರು. ರಾಜಕೀಯ ಜೀವನದಲ್ಲಿ ಪ್ರಮುಖ ಖಾತೆಗಳನ್ನು ಹೊಂದಿದ್ದ ಅವರು, 1964ರ ಜೂನ್ ನಿಂದ 1966 ಜನವರಿ ವರೆಗೆ ದೇಶದ 2ನೇ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು. ಭಾರತದ ರಾಜಕೀಯ ರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಶಾಸ್ತ್ರಿ ಅವರು, ಜೈ ಜವಾನ್, ಜೈ ಕಿಸಾನ್ ಎಂಬ ಘೋಷ ವಾಕ್ಯದ ಮೂಲಕ ದೇಶದ ಅಭಿವೃದ್ಧಿಗೆ ಹೊಸ ಹೊಳಪು ನೀಡಿದರು ಎಂದರು.

ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಗಾಂಧೀಜಿ ಈ ದೇಶಕ್ಕೆ ನೀಡಿದ ಕೊಡುಗೆ, ಸಾಹಿತ್ಯ ಕೊಡುಗೆ, ತತ್ವಗಳು, ಬೋಧನೆ, ಸ್ವಾತಂತ್ರ್ಯ ಹೋರಾಟ, ಸಿದ್ಧಾಂತಗಳು ಎಲ್ಲ ರೀತಿಯ ಕೊಡುಗೆಗಳಿಂದ ರಾಷ್ಟ್ರಪಿತನಾಗಿ ಎಲ್ಲರ ಮನದಲ್ಲಿ ಉಳಿದಿದ್ದಾರೆ. ಇಂದು ಅವರ ಜನ್ಮ ದಿನವನ್ನು ರಾಷ್ಟ್ರೀಯ ಹಬ್ಬವಾಗಿ ಗಾಂಧಿ ಜಯಂತಿ ಎಂದು ಪ್ರತಿವರ್ಷ ಆಚರಣೆ ಮಾಡುತ್ತಿದ್ದೇವೆ. ಈ ದೇಶದ ಸ್ವಾತಂತ್ರ್ಯಕ್ಕೆ ಅಹಿಂಸಾ ಮಾರ್ಗದಲ್ಲಿ ಹೋರಾಡಿದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮ ದಿನಾಚರಣೆಯಲ್ಲಿ ಅವರ ನೆನಪು ಎಂದಿಗೂ ಅಜರಾಮರ ಎಂದರು.

ಗಾಂಧೀಜಿಯವರ ತತ್ವಗಳಿಗೆ ಮುಖ್ಯ ಸ್ಫೂರ್ತಿ ಭಗವದ್ಗೀತೆ ಮತ್ತು ರಾಮಯಣ.

ಪ್ರಸಿದ್ಧ ಸಾಹಿತಿ ಲಿಯೋ ಟಾಲ್‌ಸ್ಟಾಯ್ ರವರ ಬರಹಗಳು. ಪುಸ್ತಕಗಳನ್ನು ನಾವುಗಳು ಓದುವುದರಿಂದ ಹೆಚ್ಚಿನ ಜ್ಞಾನ ಮಾತ್ರವಲ್ಲದೇ ಸತ್ಯ, ಪ್ರಾಮಾಣಿಕತೆ, ಒಳ್ಳೆಯ ಗುಣಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕೆಂದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಎಸ್. ಮಲ್ಲಿಕಾರ್ಜುನ್, ಮಹಾಪೌರ ಕೆ. ಚಮನ್ ಸಾಬ್, ಉಪ ಮಹಾ ಪೌರ ಸೋಗಿ ಶಾಂತಕುಮಾರ್, ಕೆ.ಜಿ. ಶಿವಕುಮಾರ್, ಎ. ನಾಗರಾಜ್, ಜಿ. ಎಸ್. ಮಂಜುನಾಥ್, ಸುರಭಿ ಶಿವಮೂರ್ತಿ, ಅನಿತಾಬಾಯಿ ಮಾಲತೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕಾಳಿಕಾದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಇಂದಿನಿಂದ ದಸರೋತ್ಸವ

ನವರಾತ್ರಿ ಪ್ರಯುಕ್ತ ನಗರದ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾ ದೇವಿ ವಿಶ್ವಕರ್ಮ ದೇವಸ್ಥಾನದಲ್ಲಿ ಇಂದು ಗುರುವಾರ ಪ್ರಾತಃಕಾಲ ಗಣಪತಿ ಪೂಜೆ, ಪುಣ್ಯಾಹ ವಾಚನ ಘಟಸ್ಥಾಪನೆ ಮತ್ತು ಧ್ವಜಾರೋಹಣ ನಡೆಯುವುದು.

ಇಂದಿನಿಂದ ದಿನಾಂಕ 12ರ ಶನಿವಾರದವರೆಗೆ ಶ್ರೀ ಅಮ್ಮನವರಿಗೆ ವೇದೋಕ್ತ ಪಂಚಾಮೃತಾಭಿಷೇಕ, ದುರ್ಗಾಹೋಮ ಮತ್ತು ಪುಷ್ಪಾಲಂಕಾರ, ವಿಶೇಷ ಅಲಂಕಾರ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ದಿನಾಂಕ 11ರ ಶುಕ್ರವಾರ ದುರ್ಗಾಷ್ಟಮಿ ಮತ್ತು ಆಯುಧ ಪೂಜೆ, 12ರ ಶನಿವಾರ ವಿಜಯದಶಮಿ ಹಾಗೂ ಸಂಜೆ 6.30ಕ್ಕೆ ಪಾಲಕಿ ಉತ್ಸವದೊಂದಿಗೆ ಬನ್ನಿ ಮುಡಿಯುವುದು ನಂತರ ಪ್ರಸಾದ ವಿನಿಯೋಗವಿರುತ್ತದೆ. ಪ್ರತಿ ದಿನ ಸಂಜೆ 6 ರಿಂದ 7 ರವರೆಗೆ ಶ್ರೀ ಕಾಳಿಕಾದೇವಿ ಮಹಿಳಾ ಭಜನಾ ಮಂಡಳಿಯಿಂದ ಲಲಿತಾ ಸಹಸ್ರನಾಮ ಪಾರಾಯಣ ಮತ್ತು ಸಂಜೆ 7 ರಿಂದ 9 ರವರೆಗೆ ಟಿ. ಪರಮೇಶ್ವರಚಾರ್ ಮತ್ತು ಎನ್. ರಮೇಶಚಾರ್ ಅವರಿಂದ ಶ್ರೀ ದೇವಿಯ ಪಾರಾಯಣ ನಡೆಯಲಿದೆ.

# ಕೊಡದಗುಡ್ಡದ ಮೂಲ ಸೌಕರ್ಯಕ್ಕೆ ಆದ್ಯತೆ ಶಾಸಕ ಬಿ.ದೇವೇಂದ್ರಪ್ಪ ಭರವಸೆ



ಜಗಳೂರು, ಅ.2- ಶ್ರೀ ಕ್ಷೇತ್ರ ಕೊಡದ ಗುಡ್ಡದಲ್ಲಿ ಸಮುದಾಯ ಭವನ, ಸಿಸಿ ರಸ್ತೆ ಸೇರಿದಂತೆ ಮೂಲಸೌಕರ್ಯಕ್ಕೆ ಆದ್ಯತೆ ನೀಡಲಾಗುವುದು ಎಂದು ಶಾಸಕ ಬಿ.ದೇವೇಂದ್ರಪ್ಪ ಭರವಸೆ ನೀಡಿದರು.

ತಾಲ್ಲೂಕಿನ ಕೊಡದಗುಡ್ಡ ಗ್ರಾಮದಲ್ಲಿ ಮಹಾತ್ಮಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಅಂಗವಾಗಿ ಆಯೋಜಿಸಿದ್ದ 'ಸ್ವಚ್ಛತಾಹೀ ಸೇವಾ' ಕಾರ್ಯಕ್ರಮದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕ್ಷೇತ್ರದ ಅಭಿವೃದ್ದಿಗೆ ವೈಯಕ್ತಿಕವಾಗಿ 11 ಲಕ್ಷ ದೇಣಿಗೆಯನ್ನು ಹಂತ ಹಂತವಾಗಿ ನೀಡಲಾಗು ವುದು. ವಿವಿಧ ವಸತಿ ಯೋಜನೆಯಡಿ ತಾಲ್ಲೂಕಿಗೆ ಶೀಘ್ರದಲ್ಲಿ 500 ಮನೆಗಳು ಮಂಜೂರಾಗಲಿವೆ. ಅರ್ಹರಿಗೆ ಸೂರು ಕಲ್ಪಿಸಲಾಗುವುದು ಎಂದು ಹೇಳಿದರು.

ತಾಲ್ಲೂಕಿನಲ್ಲಿ ಬಾಲ್ಯವಿವಾಹ ಪ್ರಕರಣಗಳು ನಡೆಯದಂತೆ ಆಶಾ, ಅಂಗನವಾಡಿ ಕಾರ್ಯಕರ್ತೆ ಯರು ಜವಾಬ್ದಾರಿ ನಿಭಾಯಿಸಬೇಕು. ಶಾಲಾ ಮಕ್ಕಳಿಗೆ ಶಿಕ್ಷಕರು ಗಾಂಧೀಜಿ ಹಾಗೂ ಮಹನೀಯರ ಜೀವನ ಚರಿತ್ರೆ ತಿಳಿಸುವ ಮೂಲಕ ಸಂಸ್ಕಾರಯುತ ಶಿಕ್ಷಣ ನೀಡಬೇಕು ಎಂದು ಸಲಹೆ ನೀಡಿದರು.

ಅಸಗೋಡು ವಡ್ಡರಹಟ್ಟಿಯಲ್ಲಿ ಕೃಷಿ ಹೊಂಡಕ್ಕೆ ಬಿದ್ದು ಇಬ್ಬರು ಬಾಲಕಿಯರ ಸಾವನ್ನಪ್ಪಿ ರುವುದು ಹೃದಯವಿದ್ರಾವಕ ಘಟನೆ. ಎಲ್ಲಿಯೂ ಇಂತಹ ಘಟನೆಗಳು ಮರುಕಳಿಸದಂತೆ ಪೋಷಕರು ಜಾಗೃತರಾಗಬೇಕು. ಅತಿವೃಷ್ಟಿ ಯಿಂದ ಕೆರೆಕಟ್ಟೆಗಳು ತುಂಬಿ ಹರಿಯುತ್ತಿದ್ದು, ದಸರಾ ರಜಾ ದಿನಗಳಲ್ಲಿ ಮಕ್ಕಳ ಚಲನವಲನ ಬಗ್ಗೆ ನಿಗಾವಹಿಸಬೇಕು ಎಂದು ಸಲಹೆ ನೀಡಿದರು.

ಅಮೃತ ಗ್ರಾಮ ಯೋಜನೆ ಯಡಿ ವಿವಿಧ ಶಾಲೆಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಶಾಸಕ ರು ವಿತರಿಸಿದರು.

ಸಮಾರಂಭದಲ್ಲಿ ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ, ತಾ.ಪಂ ಇಓ ಕೆಂಚಪ್ಪ, ಬಿಇಓ ಹಾಲಮೂರ್ತಿ, ಗ್ರಾ.ಪಂ ಅಧ್ಯಕ್ಷೆ ರಣದಮ್ಮ, ಉಪಾಧ್ಯಕ್ಷ ವೀರೇಶ್, ಸದಸ್ಯರಾದ ಬಸವಾಪುರ ರವಿಚಂದ್ರ, ಅಂಜಿನಪ್ಪ, ಗುರುಸ್ವಾಮಿ, ಸದಾ ಶಿವಪ್ಪ, ಎಇಇ ಸಾಧಿಕ್ ಉಲ್ಲಾ, ಶಿವಮೂರ್ತಿ, ನಾಗರಾಜ್, ಸಿಡಿಪಿಓ ಬೀರೇಂದ್ರ ಕುಮಾರ್, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಶಂಕರ್, ಪಿಡಿಓ ಸುನಿತಾ, ವಾಸುದೇವ, ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಬಿ. ಮಹೇಶ್ವರಪ್ಪ ಇದ್ದರು.

## ನಗರದ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದಲ್ಲಿ ಇಂದು

ವಿದ್ಯಾನಗರ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನ ದಲ್ಲಿ ಇಂದಿನಿಂದ 10 ದಿನಗಳ ಕಾಲ ವಿಶೇಷ ಕಾರ್ಯ ಕ್ರಮಗಳು ನಡೆಯಲಿವೆ. ಇಂದು ಬೆಳಿಗ್ಗೆ 7.30 ಕ್ಕೆ ಶ್ರೀ ದೇವಿ ಘಟಸ್ಥಾಪನೆ ನೆರವೇರಲಿದೆ. ಸಂಜೆ 6 ಗಂಟೆಗೆ ಅಮರಯ್ಯ ಶಾಸ್ತ್ರಿ ತೋಗೆರೆ, ಶರಣಯ್ಯ ಗವಾಯಿಗಳು ಬೆಣಮಗೇರಾ ಇವರಿಂದ ಪುರಾಣ ಪಾರಾಯಣ ಇರುತ್ತದೆ. ಪ್ರತಿ ದಿನ ಸಂಜೆ 4 ಗಂಟೆಗೆ ಲಲಿತಾ ಸಹಸ್ರ ನಾಮ ಪಾರಾಯಣ ಇರುತ್ತದೆ ಎಂದು ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಬೆಳವನೂರು ನಾಗರಾಜಪ್ಪ ತಿಳಿಸಿದ್ದಾರೆ.

## ಚೌಡೇಶ್ವರಿ ದೇವಿಗೆ ಇಂದು ಅರಿಶಿಣ ಕುಂಕುಮ ಅಲಂಕಾರ

ದಾವಣಗೆರೆ ದಾವಲ್‌ಪೇಟೆಯ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ 10 ದಿನ ಪ್ರತಿ ನಿತ್ಯ ಒಂದೊಂದು ಬಗೆಯ ವಿಶೇಷ ಅಲಂಕಾರ ಮಾಡಲಾಗುವುದು. ಇಂದು ಅರಿಶಿಣ ಕುಂಕುಮ ಅಲಂಕಾರ ಮಾಡಲಾಗುವದು. ಅಲಂಕಾರ ಪೂಜೆ ಮಾಡಿಸುವ ಭಕ್ತರು ಶಶಿಧರ ಭಟ್ಟರು (9902604233), ಎಲ್.ಆರ್. ವೆಂಕಟೇಶ್ (9620174808), ಶ್ರೀಧರ ಮೂರ್ತಿ (97430 98298), ಪೂಜಾರ್ ಜಗನ್ನಾಥ್ (9742569173) ಇವರನ್ನು ಸಂಪರ್ಕಿಸಬಹುದು.

## ಜಿಲ್ಲಾ ಪಿಂಜಾರ್ ಸಮಾಜದಿಂದ ಮೇಯರ್ ಚಮನ್‌ಸಾಬ್‌ಗೆ ಸನ್ಮಾನ



ದಾವಣಗೆರೆ, ಅ. 2- ಮಹಾನಗರ ಪಾಲಿಕೆಯ ನೂತನ ಮೇಯರ್ ಆಗಿ ಆಯ್ಕೆಯಾದ ಪಿಂಜಾರ್ ಸಮಾಜದ ಹಿರಿಯರಾದ ಕೆ. ಚಮನ್ ಸಾಬ್ ಅವರನ್ನು ಜಿಲ್ಲಾ ಪಿಂಜಾರ್ ಸಮಾಜ ಬಾಂಧವರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಿಂಜಾರ್ ನಧಾಪ್ ಸಮಾಜದ ಹಿರಿಯರು ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ನಿವೃತ್ತ ಪ್ರಾಂಶುಪಾಲ ಇಮಾಂ ಮತ್ತು ಪಿಂಜಾರ್ ನದಾಪ್ ಸಂಘದ ಮಾಜಿ ಅಧ್ಯಕ್ಷ ಡಿ.ಕೆ. ಫಾರ್ಮಾದ ಖಾದರ್ ಬಾಷಾ ಜೆ.ಹೆಚ್.ಉಕ್ಕಡಗಾತ್ರಿ, ದಾವಣಗೆರೆ ಪಿಂಜಾರ್ ನದಾಪ್ ಸಂಘದ ಉಪಾಧ್ಯಕ್ಷ ರಾಜಾ ಸಾಬ್, ಬಡೇಸಾಬ್, ಜಿಲ್ಲಾ ಕಾರ್ಯದರ್ಶಿ ಸೈಫುಲ್ಲಾ, ಖಜಾಂಜಿ ಮೊಟ್ಟೆ ದಾದಾಪೀರ್, ನಗರ ಘಟಕದ ಅಧ್ಯಕ್ಷ ಹೊನ್ನೂರುಸಾಬ್, ಕಾರ್ಯದರ್ಶಿ ಶುಕ್ರುಸಾಬ್, ಪಿಂಜಾರ್ ನದಾಫ್ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಮಿಕ ವಿಭಾಗದ ರಾಜ್ಯ ಜಂಟಿ ಕಾರ್ಯದರ್ಶಿ ಹುಸೇನ್ ಸಾಬ್ ಮತ್ತಿ ಹಾಗೂ ಇತರರು ಉಪಸ್ಥಿತರಿದ್ದರು.

## ನಗರದ ತುಳಜಾ ಭವಾನಿ ದೇವಸ್ಥಾನದಲ್ಲಿ ಇಂದಿನಿಂದ ದಸರಾ ಉತ್ಸವ



ಕೆಟಿಜೆ ನಗರ 3ನೇ ಮುಖ್ಯ ರಸ್ತೆ, 11 ಮತ್ತು 12ನೇ ಕ್ರಾಸ್‌ನಲ್ಲಿರುವ ಶ್ರೀ ತುಳಜಾ ಭವಾನಿ ದೇವಸ್ಥಾನದಲ್ಲಿ ಇಂದಿನಿಂದ 9 ದಿನ ನಾಡ ಹಬ್ಬ ದಸರಾ ಮಹೋತ್ಸವ ಜರುಗಲಿದೆ. ಬೆಳಿಗ್ಗೆ 9 ಗಂಟೆಗೆ ಹರಿಹರದಲ್ಲಿ ಅಮ್ಮನವರಿಗೆ ಗಂಗಾ ಪೂಜೆ ಜರುಗಲಿದೆ. ನಂತರ ಸಂಜೆ 7 ಗಂಟೆಗೆ ಶ್ರೀ ದೇವಿಯ ಘಟ ಸ್ಥಾಪನೆ, ದೀಪ ಹಾಕುವ ಕಾರ್ಯಕ್ರಮ ಏರ್ಪಾಡಾಗಿದೆ.

## ನಗರದಲ್ಲಿ ಇಂದು ಜೆಡಿಎಸ್ ಪ್ರತಿಭಟನೆ

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಬಗ್ಗೆ ಅವಹೇಳನಕಾರಿ ಪದ ಬಳಸಿದ ಲೋಕಾಯುಕ್ತ ಎಡಿಜಿಪಿ ಎಂ. ಚಂದ್ರಶೇಖರ್ ಅವರ ವಿರುದ್ಧ ಜೆಡಿಎಸ್ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಿಂದ ಉಪ ವಿಭಾಗಾಧಿಕಾರಿ ಕಚೇರಿಯವರೆಗೆ ಪ್ರತಿಭಟನೆ ನಡೆಸಲಾಗುವುದು ಎಂದು ಪಕ್ಷದ ಕಾರ್ಯಾಧ್ಯಕ್ಷ ಟಿ. ಗಣೇಶ ದಾಸಕರಿಯಪ್ಪ ತಿಳಿಸಿದ್ದಾರೆ. ಪ್ರತಿಭಟನಾ ಮೆರವಣಿಗೆಯಲ್ಲಿ ಪಾವಗಡ ಮಾಜಿ ಶಾಸಕ ತಿಮ್ಮರಾಯಪ್ಪ, ಹರಿಹರ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ತುಮಕೂರು ಜೆಡಿಎಸ್ ಜಿಲ್ಲಾಧ್ಯಕ್ಷ ಅಂಜನಪ್ಪ, ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.



# ನಗರದಲ್ಲಿ ಇಂದು ದಾವಣಗೆರೆ ಪ್ರೀಮಿಯರ್ ಲೀಗ್ - 2024

ದಾವಣಗೆರೆ, ಅ.2- ನಗರದ ಜನಪ್ರಿಯ ಕ್ರಿಕೆಟ್ ಕ್ಲಬ್ ವತಿಯಿಂದ ಪ್ರೀಮಿಯರ್ ಲೀಗ್ - 2024 ಪಂದ್ಯಾವಳಿಯು ಎರಡನೇ ಬಾರಿಗೆ ಇಂದಿನಿಂದ ಇದೇ ದಿನಾಂಕ 6ರವರೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಾಡಾಗಿದೆ.

ಪ್ರೀಮಿಯರ್ ಲೀಗ್ ಅಂಗವಾಗಿ ಕಲಾ ತಂಡಗಳೊಂದಿಗೆ ಆಟಗಾರರು ಇಂದು ಮೆರವಣಿಗೆ ನಡೆಸಿದರು. ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಿಂದ ಆರಂಭಗೊಂಡ ಮೆರವಣಿಗೆಯು ರಾಜಬೀದಿಗಳ ಮುಖಾಂತರ ಜಿಲ್ಲಾ ಕ್ರೀಡಾಂಗಣವನ್ನು ತಲುಪಿತು.

ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಮೇಯರ್ ಕೆ. ಚಮನ್ ಸಾಬ್, ದಾನಿಗಳಾದ ಶಿವಗಂಗಾ ಶ್ರೀನಿವಾಸ್, ಕುರುಡಿ ಗಿರೀಶ್, ಡಿ.ಎಲ್. ಶಿವಪ್ರಕಾಶ್ ನೇತೃತ್ವದಲ್ಲಿ ಮೆರವಣಿಗೆ ನಡೆಸಲಾಯಿತು ಎಂದು ಇಲೆವೆನ್ಸ್ ಕ್ರಿಕೆಟ್ ಕ್ಲಬ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದ ಸಹ ಕಾರ್ಯದರ್ಶಿ ಜಯಪ್ರಕಾಶ್ ಗೌಡ ತಿಳಿಸಿದ್ದಾರೆ.

## ಕೃಷಿ ಹೊಂಡ ನಿರ್ಮಾಣಕ್ಕೆ ಅರ್ಜಿ

ಹೊನ್ನಾಳಿ, ಅ.2- ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳಲ್ಲಿ 2024-25ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ 'ಕೃಷಿ ಹೊಂಡ ನಿರ್ಮಾಣ'ಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿ ಭಾಗ್ಯ ಯೋಜನೆಯು ಪ್ಯಾಕೆಜ್ ಮಾದರಿಯಲ್ಲಿದ್ದು, ಕ್ಷೇತ್ರ ಬದು, ಕೃಷಿ ಹೊಂಡ, ಪಾಲಿಥಿನ್ ಹೊದಿಕೆ, ಡೀಸೆಲ್ ಪಂಪ್ ಸೆಟ್, ಲಘು ನೀರಾವರಿ ಘಟಕ ಹಾಗೂ ತಂತಿ ಬೇಲಿಗಳನ್ನು ಒಳಗೊಂಡಿರುತ್ತದೆ. ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು.

REQUIRED

| | |
|---|---|
| MARKETING / SALES PERSON | - 04 |
| SALES PERSON (Counter) | - 02 |
| OFFICE INCHARGE | - 01 |
| DELIVERY BOYS | - 03 |

Degree holders and experinece preferred.
Contact with relevant documents.
VISHWAS SCIENTIFIC Co.
491/3B, Naganagowdru Complex, Hadadi Road, Davanagere - 2
Mob : 75800 75844
Timings : 11 AM to 2 PM, 6 PM to 7.30 PM



ದಾವಣಗೆರೆ ಜಿಲ್ಲಾ ರೆಡ್ಡಿ ಜನಸಂಘ, ದಾವಣಗೆರೆ.





# ವೈಕುಂಠ ಸಮಾರಾಧನೆ



ಜನನ
6.12.1973

ಮರಣ
21.9.2024

## ದಿ|| ಕೆ. ಶ್ರೀನಿವಾಸ್ ರೆಡ್ಡಿ (ರಾಜು ರೆಡ್ಡಿ)

ಪ್ರಥಮ ದರ್ಜೆ ಗುತ್ತಿಗೆದಾರರು, ಉಪಾಧ್ಯಕ್ಷರು, ದಾವಣಗೆರೆ ಜಿಲ್ಲಾ ರೆಡ್ಡಿಜನಸಂಘ, ದಾವಣಗೆರೆ.

ದಿ|| ಶ್ರೀನಿವಾಸ್ ರೆಡ್ಡಿ (ಕೆ. ರಾಜು ರೆಡ್ಡಿ) ಇವರ ನಿಧನವಾರ್ತೆ ತಿಳಿದು ದಿಗ್ಭ್ರಮೆಗೊಂಡಿರುತ್ತೇವೆ. ಶ್ರೀಯುತರು ದಿ. 21.09.2024 ಶನಿವಾರ ಬೆಳಿಗ್ಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ನಿಧನದ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡಲೆಂದು ಕರುಣಾಮಯಿ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಮೃತರ ತತ್ಸಂಬಂದವಾದ ಉತ್ತರಕ್ರಿಯಾದಿಗಳನ್ನು ದಿ. 03.10.2024 ಗುರುವಾರ ಬೆಳಿಗ್ಗೆ 12 ಗಂಟೆಗೆ "ಮೃತರ ಸ್ವಗೃಹ ಶಿವಕುಮಾರಸ್ವಾಮಿ ಬಡಾವಣೆ"ಯ 1ನೇ ಮೇನ್, 1ನೇ ಕ್ರಾಸ್, ಮಾಗನೂರುಬಸಪ್ಪ ಪೆಟ್ರೋಲ್ ಬಂಕ್ ಹಿಂಭಾಗ, ದಾವಣಗೆರೆಯಲ್ಲಿ "ವೈಕುಂಠ ಸಮಾರಾಧನೆ"ಯನ್ನು ಏರ್ಪಡಿಸಲಾಗಿದೆ.

ಈ ಪ್ರಯುಕ್ತ ತಾವೆಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖಪತ್ತರು**

ಅಧ್ಯಕ್ಷರು, ಕೆ. ವೆಂಕಟರಾಮಿರೆಡ್ಡಿ,
ಹಾಗೂ ಕಾರ್ಯಕಾರಣಿ ಸಮಿತಿ, ದಾವಣಗೆರೆ ರೆಡ್ಡಿ ಜಿಲ್ಲಾ ಜನಸಂಘ, ದಾವಣಗೆರೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas